||धर्मो रक्षति रक्षितः||

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XIX, No. 5 | August 2011 | Pages 12 | **Rs. 2/-**




## ANNUAL GENERAL BODY MEETING-2011

**The Annual General Body Meeting will be held on Sunday, 28th August 2011 at 10.00 a.m. at Devadiga Hall, Dadar (E)**

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat
***Hon. Joint Editor*** : G. V. Bhagwat

***Editorial Committee*** : R. P. Hegde, R. M. Shastri, Smt. Shashikala Hegde

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

| | |
|---|---|
| ***President*** | : N. R. Hegde, Dombivli |
| ***Vice - President*** | : Shivkumar P. Bhagwat |
| ***Hon. Gen. Secretary*** | : Narayan Akadas |
| ***Hon. Jt. Secretary*** | : R. M. Shastri, Dombivli |
| ***Hon. Treasurer*** | : A. G. Bhat |

***Elected Members :***

| | |
|---|---|
| Smt. Tanuja Hegde | R. P. Hegde |
| Smt. Shashikala Hegde | R. N.Kameshwar |
| A. K. Bhat | Smt. Uma Swamy |
| M. G. Ramakrishna | Sanjay Bhat |
| Sathishkumar K.C. | |

***Co-opted Members :***

| | |
|---|---|
| G. V. Bhagwat | Balchandra Markande |
| Ganesh Shanbhag | Prabhakar Bhat |
| Shripad Bhat | |

*ಸಂಪಾದಕೀಯ*

# ನಮಗೂ ರಕ್ಷಣೆ ಬೇಕು

ದಿನಾಂಕ 13.7.2011ರಂದು ಪುನಃ ಸರಣಿ ಬಾಂಬ್ ಸ್ಫೋಟ. ಬೆಚ್ಚಿ ಬೀಳಿಸುವ ಘಟನೆಗಳ ಪುನರಾವರ್ತನೆ. ಸುರಿಯುವ ಜಡಿಮಳೆಯೂ ತಣಿಸದ ಯಾತನೆ. ಕುದಿದೂ, ಕುದಿದೂ ಮರಗಟ್ಟುವ ಸಂವೇದನೆ. ಮರು ದಿನವೇ ಪತ್ರಿಕೆಗಳಲ್ಲಿ 'Mumbai bounces back to action' ಎನ್ನುವ ಬಣ್ಣನೆ.

ಎಲ್ಲೆಡೆಯಲ್ಲಿ ಚರ್ಚಿಸಲ್ಪಡುವ ಈ 'Mumbai spirit' ಅಂದರೇನು? ತಾವು ಕೆಲಸ ಬಿಟ್ಟು ಮನೆಯಲ್ಲಿ ಕುಳಿತುಕೊಂಡಾಕ್ಷಣ ಪರಿಸ್ಥಿತಿಯು ಬದಲಾಗುವುದಿಲ್ಲ ಎನ್ನುವ ವಾಸ್ತವಿಕತೆಯ ಅರಿವಿಗೆ ಪರ್ಯಾಯ ಶಬ್ದವೇ? ಅಥವಾ ಸದಾ ಓಡಾಡುವುದೇ ರೂಢಿಯಾದ ಅವರ ದೈನಂದಿನ ಚಟುವಟಿಕೆಗಳು ನೋಡುವವರ ಕಣ್ಣಿಗೆ ಗೋಚರಿಸುವ ಪರಿಯೇ? ಅಥವಾ ಕೆಲಸ ಬಿಟ್ಟು ಮನೆಯಲ್ಲಿ ಕುಳಿತುಕೊಳ್ಳಲಾರದ ಅನಿವಾರ್ಯತೆಯೋ? ಅಥವಾ 'ಯಾವಾಗಲೂ ಉದ್ಭವಿಸಬಹುದಾದ ಈ ಪರಿಸ್ಥಿತಿಗೆ ಹೆದರಿ ಎಷ್ಟು ದಿನ ಮನೆಯಲ್ಲಿ ಕುಳಿತುಕೊಳ್ಳಲು ಸಾಧ್ಯ' ಎಂದು ಅರಿತುಕೊಳ್ಳುವ ಜಾಣತನವೇ....ಏನಿದು?

ಹೌದು, ಮುಂಬಯಿ ಜನರು ಕಷ್ಟ ಸಹಿಷ್ಣುಗಳು. ಅವರಿಗೆ ಒಂದೇ ಕಾಲಿನಲ್ಲಿ ನೇತಾಡುತ್ತ, ಎಲ್ಲರ ಬೆವರ ವಾಸನೆಯನ್ನು ಸಹಿಸುತ್ತ, ಟ್ರೇನ್‌ಗಳಲ್ಲಿ ಓಡಾಡಿ ರೂಢಿಯಿದೆ. ಕ್ಯೂನಲ್ಲಿ ತಾಸುಗಟ್ಟಲೆ ಕಾಯುವ ಪರಿಪಾಠವಿದೆ. ದಿನನಿತ್ಯದ ಸಂಗತಿಗಳಾದ ಟ್ರಾಫಿಕ್ ಜ್ಯಾಮ್‌ಗಳು ಈ ನಗರದ ಜನರಲ್ಲಿ ತಾಳ್ಮೆ ಹೆಚ್ಚಿಸಿವೆ. 'ಯಾವದಕ್ಕೂ ಧೃತಿಗೆಡದ ಧೈರ್ಯವನ್ನು ಅವರಿಗೆ ಜೀವನ ಕಲಿಸಿದೆ. ಹೀಗಾಗಿಯೇ ಮುಂಬೈ ವಾಸಿಗಳು ಉಳಿದವರಿಗಿಂತ ಭಿನ್ನವಾಗಿ ತೋರುತಿರಬಹುದು.

ಮುಂಬಯಿವಾಸಿಗಳಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ. ಅವರು ಯಾವುದೇ ಆಪತ್ತು ಎದುರಾದರೂ ಸಹ ಒಬ್ಬರಿಗೊಬ್ಬರು ಆಸರೆಯಾಗಿ ನಿಲ್ಲುತ್ತಾರೆ. ತಮ್ಮ ದೈನಂದಿನ ಕೆಲಸಗಳನ್ನು ಬದಿಗೊತ್ತಿ, ತಮಗಾಗುವ ಕಷ್ಟ ತೊಂದರೆಗಳನ್ನು ಲೆಕ್ಕಿಸದೇ, ಯಾವ ಪ್ರತಿಫಲವನ್ನೂ ಬಯಸದೇ ಇನ್ನೊಬ್ಬರ ಸಹಾಯಕ್ಕೆ ಧಾವಿಸುವ ಪ್ರವೃತ್ತಿಯೇ ನಿಜವಾದ ಅರ್ಥದಲ್ಲಿ 'Spirit of Mumbai'.

ನಮ್ಮ ದೇಶದ ಹೆಚ್ಚಿನ ಆದಾಯಗಳಿಸಿಕೊಡುವ ನಗರ, ದೇಶದ ಆರ್ಥಿಕ ರಾಜಧಾನಿಯಾದ ಮುಂಬಯಿಯ ನಿವಾಸಿಗಳಿಗೆ ಏತಕೆ ಈ ಪ್ರಾರಬ್ಧ? ನಗರ ಜೀವನದ ದಿನನಿತ್ಯದ ತಲ್ಲಣ, ನೈಸರ್ಗಿಕ ವಿಕೋಪಗಳೊಂದಿಗೆ ಆತಂಕವಾದಿಗಳ ನಿಶಾನೆಗೆ ಮುಂಬಯಿ ಪದೆ ಪದೆ ಈಡಾಗುವುದೇಕೆ? ನಾವಾದರೂ ಎಷ್ಟೆಂದು ಸಹಿಸಿಯೇವು?

ನಮ್ಮ ವೃತ್ತಪತ್ರಿಕೆಗಳಾದರೂ ಆತಂಕವಾದದ ಬೀಭತ್ಸ ಚಿತ್ರಗಳನ್ನುವರ್ಣಮಯವಾಗಿ ಮುದ್ರಿಸುತ್ತಿವೆ. ಕೆಲವು ಪತ್ರಿಕೆಗಳು ಈಗಿನ ದುರಂತ ಚಿತ್ರಗಳೊಂದಿಗೆ ಹಿಂದಾದ ಹಲ್ಲೆಯ ಚಿತ್ರಗಳನ್ನೂ ಪ್ರಕಟಿಸಿದ್ದವು. ಇದರಿಂದ ಅವರು ಭೀತಿಯನ್ನು ಸೃಷ್ಟಿಸುವ ಆತಂಕವಾದಿಗಳ ಆಶಯಕ್ಕೆ ಕೈ ಜೋಡಿಸಿದಂತಾಗುವದಿಲ್ಲವೇ? ಇದನ್ನು ಅರ್ಥಮಾಡಿಕೊಂಡು ವರ್ತಮಾನ ಪತ್ರಿಕೆಗಳು ಕೇವಲ ಪತ್ರಿಕೆಯ ಮಾರಾಟವನ್ನಷ್ಟೇ ಲಕ್ಷವನ್ನಾಗಿರಿಸಿಕೊಳ್ಳದೇ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕು.

ಸದಾ ಎಡವುತ್ತ, ಬೀಳುತ್ತ, ತಕ್ಷಣವೇ ಸಾವರಿಸಿಕೊಂಡು ಓಡುವ ಮುಂಬಯಿವಾಸಿಗಳಿಗೆ ಇನ್ನೂ ಹೆಚ್ಚಿನ ರಕ್ಷಣೆ ಬೇಕು. ಮುಂಬಯಿಯ ಜನಸಂಖ್ಯೆಯನ್ನು ಗಮನಿಸಿದಾಗ ಅದಕ್ಕನುಗುಣವಾಗಿರುವ ಪೋಲಿಸ್ ಸಿಬ್ಬಂದಿಗಳ ಸಂಖ್ಯೆ ಕಡಿಮೆ. ದೇಶದ ಮುಖಂಡರ ರಕ್ಷಣೆಗಾಗಿ ಸಾಕಷ್ಟು ಸುರಕ್ಷಾ ಪಡೆಯನ್ನು ನೀಡುವ ಸರಕಾರ ಶ್ರೀ ಸಾಮಾನ್ಯನ ರಕ್ಷಣೆಗೂ ಪೋಲಿಸ್ ಸಿಬ್ಬಂದಿಗಳನ್ನು ಹೆಚ್ಚಿಸಬೇಕು. ನಗರದ ವಿವಿಧ ಭಾಗಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಪರಿವೀಕ್ಷಿಸಬೇಕು. ಸುರಕ್ಷಾ ಕವಚವು ನಮಗೂ ಬೇಕು.

*Amita S Bhagwat*

e-mail : amitabhagwat@gmail.com

*PAGE DONATED BY :* ***ADVOCATE M.S. PANDIT, PUNE .***

# PRESIDENT'S MESSAGE

Dear Friends,

We are delighted to know that many students of our community have come out with flying colours in their Board Examinations. We are happy to know that many students have scored above 90%. We, Havyakas, have always given importance to academics which in turn shapes our lives and paves way to our success. We are happy to watch the budding talents who have brought accolades to their parents and community. The aspiring students who are on the threshold of their life have to decide about their career. The decision they make now will mould their future. Therefore career planning plays a vital role. We also plan to hold career guidance seminars in coming years.

We are happy to know that Shri Vinaya Bhat has been elected as the president of Rotary club Kandivli. In the installation ceremony which was attended by many dignitaries, it was mentioned while introducing Shri Vinaya Bhatt that he belongs to Havyaka Community. Indeed, being Havyaka is our identity which also speaks about our culture. We are glad that Shri Vinaya Bhat has set a good example. We wish Rotarian Vinay Bhat a successful year of Rotary 2011-2012.

We are sorry to note the sad demise of our past president Shri T.S.Bhat. We would like to specially mention that in spite of his old age he attended our AGM in year 2008 in which we felicitated many of our past presidents. On that occasion we had the privilege to felicitate him. We always remember his commitment and love for the organization. Let us pray the Almighty for the eternal peace of the departed soul.

We are finalizing the accounts of the Panvel land. Sometimes unexpected problems come up which cause delay in coming to a conclusion. We would like to complete the task by the end of August. In a gigantic task like this we have no choice but to have patience and with the expertise knowledge and help of our members we hope to complete it soon.

There is no progress about getting NA status for Dombivli land

We are again requesting all of you to attend the AGM scheduled on August 28th 2011 in large number.

With warm regards.

**N.R. HEGDE**

*President*

## ಮಹಿಳಾ ಕಲ್ಯಾಣ ವಿಭಾಗ

**ಹವ್ಯಕ ವೆಲ್ಫೇರ್ ಟ್ರಸ್ಟಿನಿಂದ ವಿದ್ಯಾರ್ಥಿ ವೇತನವನ್ನು ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ತಮ್ಮ ಪೂರ್ಣ ವಿವರಗಳನ್ನು ನೀಡಬೇಕು. ವಿಳಾಸ, ಫೋನ್ ನಂಬರ್, ಹಿಂದಿನ ಪರೀಕ್ಷೆಯ ಮಾರ್ಕ್ ಕಾರ್ಡಿನ ಜೆರಾಕ್ಸ್, ಅವರು ನೀಡಿದ Fee receiptನ ಜೆರಾಕ್ಸ್ ಗೌರವಾನ್ವಿತ ಹವ್ಯಕರಿಂದ ಶಿಪಾರಸು ಪತ್ರ, ಶಿಪಾರಸು ನೀಡುವವರ ವಿಳಾಸ ಹಾಗೂ ಫೋನ್ ನಂಬರ್, ಪಾಲಕರ ಆದಾಯ ಪತ್ರ ಈ ಎಲ್ಲ ವಿವರಗಳನ್ನು ಒಳಗೊಂಡ ಅರ್ಜಿ ಸೆಪ್ಟಂಬರ್ 15ರೊಳಗೆ ಕಲೀನಾ ಆಫೀಸಿಗೆ ತಲುಪಿಸಬೇಕು. ತಮ್ಮ ಎಲ್ಲ ಆದಾಯ ಮೂಲವನ್ನು ತಿಳಿಸಬೇಕು. ಈ ವಿವರಗಳಿಲ್ಲದ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ.**

## ವರಮಹಾಲಕ್ಷ್ಮಿ ವ್ರತ ಆಚರಣೆ

**ಆಗಸ್ಟ್ 12, 2011ರಂದು ವರಮಹಾಲಕ್ಷ್ಮಿ ವ್ರತದ ಪೂಜೆಯನ್ನು ಡೊಂಬಿವಿಲಿಯ ಹವ್ಯಕ ಮಹಿಳಾ ವಿಭಾಗದವರು ಆಚರಿಸಲಿದ್ದಾರೆ.**

**ಪೂಜೆಯಲ್ಲಿ ಪಾಲ್ಗೊಳ್ಳುವ ಮಹಿಳೆಯರು ಈ ಕೆಳಗಿನವರನ್ನು ಸಂಪರ್ಕಿಸಿರಿ**

**ಶಾರದಾ ಕರ್ಕಿ : 2487291** **ಮಂಜುಳಾ ಭಟ್ : 9967632816**

*PAGE DONATED BY : **SMT. SHANTA V. HEGDE,** CARMICHAEL ROAD (DEC.-2011)*

# ಅಮೃತಾಹಾರವು ಆಂದೋಲನವಾಗಲಿ-ಶ್ರೀ ರಾಘವೇಶ್ವರ ಶ್ರೀಗಳು



ಗೋಕರ್ಣ : ಇಂದು ನಾವು ಬಳಸುತ್ತಿರುವ ಆಹಾರವೆಲ್ಲವೂ ರಾಸಾಯನಿಕಯುಕ್ತವಾಗಿದ್ದು ಅಕ್ಷರಶಃ ನಾವು ವಿಷವನ್ನೇ ತಿನ್ನುತ್ತಿದ್ದೇವೆಂದರೆ ಅತಿಶಯೋಕ್ತಿಯ ಮಾತಲ್ಲ. ಸಂಪೂರ್ಣ ವಾತಾವರಣವೂ ಕಲಷಿತ ಗೊಂಡಿದ್ದು ನಾವು ಉಪಯೋಗಿಸುವ ಹೆಚ್ಚಿನ ವಸ್ತುಗಳು ಒಂದೋ ಕೃತಕ ಅಥವಾ ರಾಸಾಯನಿಕಯುಕ್ತ. ಆಹಾರವು ಕೇವಲ ಹೊಟ್ಟೆಯನ್ನು ತುಂಬಿಸುವ ವಸ್ತು ಮಾತ್ರವಲ್ಲ ಬದಲಾಗಿ ಅದು ಶುದ್ಧವಾಗಿದ್ದರೆ ಮಾತ್ರ ಅದರಿಂದ ಪರಿಶುದ್ಧ ಮನಸ್ಸು ರೂಪುಗೊಳ್ಳುತ್ತದೆ. ಆದ್ದರಿಂದಲೇ ನಮ್ಮ ಪ್ರಾಚೀನರು ಭಗವತ್ಪ್ರಸಾದವಾದ ಅನ್ನವನ್ನು ಉಣ್ಣುವ ಕ್ರಿಯೆಗೆ ಯಜ್ಞಸ್ವರೂಪವನ್ನು ಕೊಟ್ಟರು.ಇನ್ನಾದರೂ ನಾವು ಎಚ್ಚತ್ತು ನಮ್ಮ ಆಹಾರ ಸ್ವರೂಪದಲ್ಲಿ ಬದಲಾವಣೆಯನ್ನು ತರಬೇಕಿದೆ ಎಂದು ಶ್ರೀ ಶ್ರೀಮದ್ರಾಘವೇಶ್ವರ ಭಾರತೀ ಶ್ರೀಗಳವರು ತಿಳಿಹೇಳಿದರು.

ಗೋಕರ್ಣದ ಅಶೋಕೆಯಲ್ಲಿ ತಮ್ಮ ಹದಿನೆಂಟನೆಯ ಚಾತುರ್ಮಾಸ್ಯ ವ್ರತವನ್ನು ಸ್ವೀಕರಿಸಿ ಧರ್ಮಸಭೆಯಲ್ಲಿ ಶಿಷ್ಯಭಕ್ತರಿಗೆ ಅನುಗ್ರಹ ಸಂದೇಶವನ್ನು ನೀಡುತ್ತಿದ್ದ ಪೂಜ್ಯ ಶ್ರೀಗಳು ಮಹಿಳೆಯರು ಮೊದಲು ತಮ್ಮ ಅಡಿಗೆಮನೆಯನ್ನು ವಿಷಮುಕ್ತವನ್ನಾಗಿ ಮಾಡಿ ಈ ವಿಚಾರವನ್ನು ಆಂದೋಲನವನ್ನಾಗಿ ಮಾಡಬೇಕಿದೆ ಎಂದು ನುಡಿದರು.

ಈ ಉದ್ದೇಶದಿಂದಲೇ ಪರಿವರ್ತನೆಯು ನಮ್ಮಿಂದಲೇ ಪ್ರಾರಂಭವಾಗಲೆಂದು ಈ ಚಾತುರ್ಮಾಸ್ಯದಲ್ಲಿ ಸಾವಯುವ ವಸ್ತುಗಳನ್ನೇ ಬಳಸಲಾಗುತ್ತಿದೆ. ರೋಗಮುಕ್ತವಾದ ಸ್ವಸ್ಥ ಬದುಕನ್ನು ಹೊಂದಲು ಇದು ಅತ್ಯಗತ್ಯ ಎಂದರು. ಚಾತುರ್ಮಾಸ್ಯವು ಯತಿಗಳಿಗೆ ಉತ್ಸವವಿದ್ದಂತೆ. ಸದಾ ಸಂಚಾರವನ್ನು ಮಾಡುತ್ತಿರುವ ಸನ್ಯಾಸಿಗಳು ಮಳೆಗಾಲದ ಈ ಕಾಲದಲ್ಲಿ ಒಂದೆಡೆ ನಿಂತು ಅಂತರ್ಮುಖಿಗಳಾಗಿ ಸ್ವಾತ್ಮಧ್ಯಾನಪಾರಾಯಣರಾಗಬೇಕು. ಇದೊಂದು ಯತಿವಿಧಿ. ಒಂದು ರೀತಿಯಲ್ಲಿ ಇದೊಂದು ಬಂಧನವೇ ಆದರೂ ಬಿಡುಗಡೆಯನ್ನು ನೀಡುವ ಬಂಧನವೆಂದೇ ಇದು ಎಲ್ಲರಿಗೂ ಪ್ರಿಯ. ಅಲ್ಲದೆ ಈ ಕಾಲದಲ್ಲಿ ನೊಂದವರ ಬಾಳಿಗೆ ಬೆಳಕಾಗುವ ಆರ್ತರಿಗೆ ಸಾಂತ್ವನ ನೀಡುವ ಗ್ರಹಯಾಗವು ಪ್ರತಿನಿತ್ಯವೂ ಆಯೋಜಿತವಾಗಿದೆ. ವೇದಗಳ ಕಣ್ಣೆಂದೇ ಪ್ರಸಿದ್ಧವಾದ ಜ್ಯೋತಿಷಶಾಸ್ತ್ರವನ್ನು ಆಧರಿಸಿ ಬದುಕಿನಲ್ಲಿ ಬಂದೆರಗಿದ ಕಷ್ಟ, ನಷ್ಟಗಳಿಗೆ ಪರಿಹಾರವನ್ನು ನೀಡುವ ಪ್ರಕ್ರಿಯೆಯಿದು. ಎಲ್ಲಕ್ಕೂ ಶಿಖರಪ್ರಾಯವಾಗಿ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮಚಂದ್ರನ ಬದುಕಿನ ತತ್ವ, ಆದರ್ಶಗಳನ್ನು ಶ್ರೀರಾಮಕಥೆಯ ಮೂಲಕ ಸಾದರ ಪಡಿಸಿದ್ದು ಪ್ರವಚನ, ರೂಪಕ, ನೃತ್ಯ, ಗೀತ ಹಾಗೂ ವಾದ್ಯ, ಚಿತ್ರಗಳೇ ಮೊದಲಾದ ಎಲ್ಲ ಮಾಧ್ಯಮಗಳ ಮುಖಾಂತರ ಈ ಕಾರ್ಯಕ್ರಮವು ಸಂಪನ್ನಗೊಳ್ಳಲಿದೆ. ನೂರಾರು ರಾಮಾಯಣಗಳ ಮಧ್ಯೆ ನೈಜವಾದ ವಾಲ್ಮೀಕಿ ವಿರಚಿತವಾದ ರಾಮಾಯಣವು ಮರೆಯಾಗಿದೆ. ಶ್ರೀರಾಮನ ಕಾಲದಲ್ಲಿದ್ದು ಸ್ವತಃ ಶ್ರೀರಾಮರಾಜ್ಯವನ್ನು ಕಂಡು ಅನುಭವಿಸಿದ ವಾಲ್ಮೀಕಿಯ ಅನುಭವದ ನಿರೂಪಣೆಯಿರುವ ಈ ರಾಮಾಯಣ ನಮ್ಮ ಬದುಕಿಗೆ ತೀರ ನಿಕಟವಾಗಿದೆ ಹಾಗೂ ಅನುಸರಣೀಯವಾಗಿದೆ ಎಂದು ನುಡಿದ ಶ್ರೀಗಳು ಸಮಸ್ತ ವಿಶ್ವದಲ್ಲಿಯೇ ಮೊದಲಬಾರಿಗೆ ಗೋವಿನಕುರಿತಾಗಿ ಜಾಗೃತಿಯು ಮೂಡಲಿಕ್ಕೆ ಪ್ರೇರಣೆ ನಮ್ಮ ಮಠದಲ್ಲಿ ಸಂತನಂತೆ ಬಾಳಿ ಇತ್ತೀಚೆಗೆ ಪಂಚತ್ವನ್ನು ಹೊಂದಿದ ಮಹಾನಂ ಎಂಬ ವೃಷಭರಾಜ. ಅದು ಎಂದು ನಮ್ಮ ಕಣ್ಣಿಗೆ ಬಿದ್ದು ನಮ್ಮ ಶ್ರೀಮಠವನ್ನು ಪ್ರವೇಶಿಸಿತೋ ಅಂದಿನಿಂದಲೇ ಮಠದಲ್ಲಿ ಹಾಗೂ ಪರಿಸರದಲ್ಲಿ ಗೋವಿನ ವಿಷಯವಾಗಿ ಮಹಾ ಆಂದೋಳನವೇ ನಡೆಯುವಂತಾಯಿತು.

ಈ ಪುಣ್ಯಚೇತನದ ಸಂಸ್ಮರಣೆಗಾಗಿಯೇ ಈ ವರ್ಷವನ್ನು ಗೋವರ್ಷವನ್ನಾಗಿ ಆಚರಿಸಲು ಸಂಕಲ್ಪಿಸಿದ್ದೇವೆ. ಎಲ್ಲ ರೀತಿಯಲ್ಲಿ ಗವ್ಯೋತ್ಪನ್ನಗಳಿಗೆ ಪ್ರಾಶಸ್ತ್ಯವನ್ನು ನೀಡುವ ಮೂಲಕ ಮಹಾನಂದಿಯನ್ನು ನಮ್ಮ ಮನದಾಳದಲ್ಲಿ ಶಾಶ್ವತವಾಗಿಟ್ಟುಕೊಳ್ಳುವ ಹಂಬಲ ನಮ್ಮದು ಎಂದು ಹೇಳಿದ ಪೂಜ್ಯ ಶ್ರೀಗಳು ಗವ್ಯೋತ್ಪನ್ನಗಳನ್ನು ಬಳಸುವ ಮೂಲಕ ಗೋ ಆಧಾರಿತ ಬದುಕಿಗೆ ನಾಂದಿಯಾಗಬೇಕಿದೆಯೆಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಜ್ಯೋತಿಯನ್ನು ಬೆಳಗುವ ಮೂಲಕ ಗೋವರ್ಷ ಉದ್ಘಾಟಿಸಿದರು. ಚಾತುರ್ಮಾಸ್ಯ ನಿರ್ವಹಣಾ ಸಮಿತಿಯ ಎಂ.ಕೆ. ಹೆಗಡೆ ದಂಪತಿಗಳಿಂದ ಸಭಾಪೂಜೆಯು ನಡೆಯಿತು. ಗೋವರ್ಷದ ಕುರಿತಾಗಿ ಡಾ. ಕೃಷ್ಣಮೂರ್ತಿ ಹಾಗೂ ಶ್ರೀಮಠದ ಗುರುಕುಲದ ಕುರಿತಾಗಿ ಶ್ರೀ ಪ್ರಮೋದ ಪಂಡಿತ್, ಚಾತುರ್ಮಾಸ್ಯದ ಬಗ್ಗೆ ಪ್ರಾಸ್ತಾವಿಕವಾಗಿ ಕಾರ್ಯದರ್ಶಿ ನಿಸ್ರಾಣಿ ರಾಮಚಂದ್ರ ಮಾತನಾಡಿದರು.

ಮುಂಬಯಿ, ಮದ್ರಾಸ್, ಮೈಸೂರು ಮೊದಲಾದ ಹೊರ ಪ್ರದೇಶಗಳಿಂದಲೂ ಬಂದ ಶಿಷ್ಯಭಕ್ತರೂ ಸೇರಿದಂತೆ ಎರಡು ಸಾವಿರಕ್ಕೂ ಮಿಕ್ಕಿದ ಭಕ್ತರು ಸಮಾರಂಭದಲ್ಲಿ ಪಾಲೊಂಡಿದ್ದರು. ಬರುವ ಸೆಪ್ಟೆಂಬರ್ ಹನ್ನೆರಡರಂದು ಸೀಮೋಲ್ಲಂಘನ ದೊಂದಿಗೆ ಚಾತುರ್ಮಾಸ್ಯವು ಸಮಾಪ್ತಗೊಳ್ಳದೆ.

*ವರದಿ : ಸತ್ಯನಾರಾಯಣ ಶರ್ಮ*


## MATRIMONIAL

**Alliance is invited for a Doctor girl 27 years age, 5 feet 6 inches height, Gautama gotra, Punarvasu Nakshatra, MBBS,MD (pharmacology from AFMC Pune)- Parents of MBBS,MD/MS or ME/M.TECH qualified boys may *Contact*:08202535446, 9449245008 (between 5pm to 10 pm)**


*PAGE DONATED BY :* ***SHRI BALCHANDRA MARKANDE, DOMBIVLI***

*ಮಕ್ಕಳಿಗಾಗಿ ಶ್ರೀಮದ್ ಭಾಗವತ ಕಥಾ ಭಾಗ-43*

# ಭಾಗವತ ಮಹಾತ್ಮ್ಯೆ

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ। ವಸಂತ ಭಾಗವತ ವೀಣೆ**

*( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )*

ವೃಂದಾವನವು ಪ್ರತಿ ವೈಕುಂಠದ ಲೋಕವೇ ಆಗಿತ್ತು. ಭಗವಾನ್ ಶ್ರೀಕೃಷ್ಣನು ಮುರಲಿಯನ್ನು ಬಾರಿಸ ಹತ್ತಿದ ಕೂಡಲೇ ಸರ್ವ ವಿಶ್ವವು ಆ ನಾದಬ್ರಹ್ಮದಿಂದ ತುಂಬಿ ಹೋಗುತ್ತಿತ್ತು. ಪಶು ಪಕ್ಷಿಗಳು ಸ್ತಬ್ಧವಾಗಿ ಆ ದಿವ್ಯನಾದವನ್ನು ಆಲಿಸುತ್ತಿದ್ದವು. ಆಕಳುಗಳು ತಾವು ತಿನ್ನುವ ಹುಲ್ಲನ್ನು ಬಾಯಲ್ಲಿ ಇಟ್ಟುಕೊಂಡು ತಿನ್ನದೆ, ಕಿವಿನಿಗರಿಸಿ ಆ ಧ್ವನಿಯನ್ನು ಕೇಳುತ್ತಿದ್ದವು. ಅವನ ಮುರಲಿ ಹಾಗೂ ಸೌಂದರ್ಯವು ಗೋಪಿಕಾ ಕುವರಿಯರನ್ನು ಮರಳು ಮಾಡಿ ಬಿಟ್ಟಿದ್ದವು. ತಾವು ಶ್ರೀಕೃಷ್ಣನನ್ನು ಸದಾ ತಮ್ಮ ಹೃದಯದಲ್ಲಿ ಸ್ಥಿರವಾಗಿ ಇರಿಸಿಕೊಳ್ಳಬೇಕೆಂದು ನಿರ್ಣಯಿಸಿದರು. ಕಾತ್ಯಾಯನೀ ವ್ರತ ಮಾರ್ಗಶೀರ್ಷ ಮಾಸದಲ್ಲಿ ವ್ರತದಲ್ಲಿಯ ಕುಮಾರಿಯರು ಕಾತ್ಯಾಯನೀ ದೇವಿಯ ವ್ರತವನ್ನು ಆರಂಭಿಸಿದರು. ಅವರು ಕೇವಲ ಹವಿಷ್ಯನ್ನವನ್ನು ಉಂಡು ಇರುತ್ತಿದ್ದರು. ಉಷಃಕಾಲದಲ್ಲಿ ಎದ್ದು ಯಮುನಾ ಜಲದಲ್ಲಿ ಸ್ನಾನ ಮಾಡಿ ದೇವಿಯ ಮೂರ್ತಿಯನ್ನು ಮಾಡಿ ಸುಗಂಧಿತ ಚಂದನ, ಹೂವು, ಹಾರ, ಧೂಪದೀಪ ನೈವೇದ್ಯ, ಅಕ್ಕಿ, ಫಲಗಂಧ ಪೂಜೆ ಮಾಡಿ ಹೇ ಕಾತ್ಯಾಯಿನೀ ಶ್ರೀಕೃಷ್ಣನನ್ನೂ ತಮ್ಮ ಪತಿಯನ್ನಾಗಿ ಮಾಡು" ಎಂದು ಪ್ರಾರ್ಥಿಸುತ್ತಿದ್ದರು. ಹೀಗೆ ಗೋಪಿಕಾ ಕುವರಿಯರು ಶ್ರೀಕೃಷ್ಣನ ಮೇಲೆ ಅಷ್ಟು ಮೋಹಿತರಾಗಿ ಬಿಟ್ಟಿದ್ದರು.

ಹೀಗೆ ಒಂದು ತಿಂಗಳು ವ್ರತವನ್ನು ಮಾಡಿದ ಮೇಲೆ ಶ್ರೀಕೃಷ್ಣನು ಅವರಿಗೆ ಉಪಾಸನೆಯ ಫಲಕೊಡಬೇಕೆಂದು ನಿಶ್ಚಯಿಸಿದನು. ಒಂದು ದಿನ ಎಲ್ಲ ಕುಮಾರಿಕೆಯರು ಪ್ರತಿದಿನದಂತೆ ಯಮುನೆಯ ದಂಡಿಗೆ ಬಂದು ತಮ್ಮ ತಮ್ಮ ವಸ್ತುಗಳನ್ನು ಕಳಚಿ ಇಟ್ಟು ಶ್ರೀಕೃಷ್ಣನ ಗುಣಗಾನಗಳ ಗಾಯನ ಮಾಡುತ್ತ ಜಲಕ್ರೀಡೆ ಮಾಡುತ್ತಲಿದ್ದರು. ಆಗ ಶ್ರೀಕೃಷ್ಣನು, ಅವರಿಗೆ ತಿಳಿಯದೆ ಹೋಗಿ ಅವರ ಎಲ್ಲ ವಸ್ತುಗಳನ್ನು ಎತ್ತಿಕೊಂಡು ಹೋಗಿ ಹತ್ತಿರದ ಕದಂಬ ವೃಕ್ಷದ ಟೊಂಗೆಯ ಮೇಲೆ ಇಟ್ಟುಕೊಂಡು ಕುಳಿತನು ಹಾಗೂ ಗೋಪ ಬಾಲಿಕೆಯರನ್ನು ನೋಡಿ ನಗುತ್ತ "ಹೇ ಕುಮಾರಿಯರೇ ನೀವು ಇಂಥ ಚಳಿಗಾಲದಲ್ಲಿ ಇಷ್ಟು ಕಠಿಣವಾದ ವ್ರತವನ್ನು ಮಾಡಬಾರದಾಗಿತ್ತು. ನೀವು ಚಿಕ್ಕ ವಯಸ್ಸಿನ ಕುಮಾರಿಕೆಯರು. ನಾನು ನಿಮಗಿಂತ ಚಿಕ್ಕವನು. ನಿನಗೇಕೆ ನನ್ನ ಮೇಲೆ ಅಭಿಲಾಷೆ! ಈಗ ನಿಮಗೆ ನಿಮ್ಮ ವಸ್ತುಗಳು ಬೇಕಿದ್ದರೆ ನೀವು ಪ್ರತಿಯೊಬ್ಬರೂ ಬಂದು ನಿಮ್ಮ ನಿಮ್ಮ ವಸ್ತುಗಳನ್ನು ತೆಗೆದುಕೊಂಡು ಹೋಗಿರಿ" ಎಂದನು.

ಒಮ್ಮೆಲೆ ಶ್ರೀಕೃಷ್ಣನ ಧ್ವನಿಯನ್ನು ಕೇಳಿ ಗೋಪ ಕುಮಾರಿಯರು ಗಡಬಡಿಸಿದರು. ಇದೇನು? ಇಷ್ಟು ಬೆಳಗಿನ ಜಾಗದಲ್ಲಿ ಯಾರಿಗೂ ತಿಳಿಸದೆ ಇಲ್ಲಿ ಬಂದು ಶ್ರೀಕೃಷ್ಣನ ಪ್ರೀತ್ಯಾರ್ಥವಾಗಿ ಪೂಜೆ ಮಾಡುತ್ತಲಿದ್ದೆವು. ಇಂದು ಇವನೇ ಸ್ವತಃ ಬಂದಿದ್ದಾನಲ್ಲ! ಮೇಲಾಗಿ ನಮ್ಮ ವಸ್ತ್ರಗಳನ್ನೂ ಎತ್ತಿಕೊಂಡು ಹೋಗಿರುವನಲ್ಲಾ" ಎಂದುಕೊಂಡರು. ಆದರೂ ಅವರು ಲಜ್ಜಿತರಾಗಿ, ನೀರಿನಿಂದ ಹೊರಗೆ ಬರದೆ ಚಳಿಯಿಂದ ನಡುಗುತ್ತಾ ಶ್ರೀಕೃಷ್ಣನನ್ನು ವಸ್ತ್ರಕ್ಕಾಗಿ ಬೇಡಿಕೊಳ್ಳಹತ್ತಿದರು. "ವಸ್ತ್ರಗಳನ್ನು ಕೊಡದಿದ್ದರೆ ನಂದ ಬಾಬಾನ ಹತ್ತಿರ ಹೋಗಿ ಹೇಳುವೆವು. ಅಂದರೆ ಅವರ ಮಾತು ಕೇಳಿ ಕೃಷ್ಣನು ನಗಹತ್ತಿದನು. ಕೊನೆಗೆ ನಾವು ನಿನ್ನ ದಾಸಿಯರಾಗಿರುವೆವು. ನೀನು ಹೇಳಿದಂತೆ ಕೇಳುವೆವು. ವಸ್ತುಗಳನ್ನು ಕೊಡು" ಎಂದರು.

ಆಗ ಕೃಷ್ಣನು ನಿಮ್ಮ ಹೃದಯದಲ್ಲಿ ಪವಿತ್ರತೆ ಇರುತ್ತದೆ. ನೀವು ನನ್ನ ದಾಸಿ ಇರುವೆವೆಂದು ಹೇಳುತ್ತೀರಿ. ಹಾಗಾದರೆ ನನ್ನ ಆಜ್ಞೆಯನ್ನು ಪಾಲಿಸಿರಿ. ನೀವು ಇಲ್ಲಿಗೆ ಬಂದು ನಿಮ್ಮ ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ" ಎಂದನು. ಆಗ ಕುಮಾರಿಯರು ಚಳಿಯಿಂದ ನಡುಗುತ್ತ ತಮ್ಮ ಎರಡೂ ಕೈಗಳಿಂದ ಅಂಗಗಳನ್ನು ಮುಚ್ಚಿಕೊಂಡು ನೀರಿನಿಂದ ಹೊರಗೆ ಬಂದರು. ಇಷ್ಟಾದರೂ ಅವರಿಗೆ ಶ್ರೀಕೃಷ್ಣನ ಬಗ್ಗೆ ತಿರಸ್ಕಾರವಾಗಲಿ, ಅಪ್ರಿಯತೆಯಾಗಲಿ ಉಂಟಾಗಲಿಲ್ಲ. ಆಗ ಶ್ರೀಕೃಷ್ಣನು ಅವರ ವ್ರತದ ಪೂರ್ಣ ಫಲ ಕೊಡುವ ಹೇಳುವಿನಿಂದ "ಗೋಪ ಕುಮಾರಿಯರೇ, ನಿಮಗೆ ನಿಮ್ಮ ವ್ರತದ ಫಲ ಸಿಗುವುದರಲ್ಲಿ ಸಂದೇಹವಿಲ್ಲ. ಆದರೆ ನೀವು ನಗ್ನರಾಗಿ ಜಲದಲ್ಲಿ ಸ್ನಾನ ಮಾಡಿದ್ದರಿಂದ, ವರುಣನ ಹಾಗೂ ಯಮುನೆಯ ಅಪರಾಧ ಮಾಡಿದಂತಾಗಿದೆ. ಕಾರಣ ಆ ದೇವತೆಗಳಿಗೆ ಕೈ ಮುಗಿದು ಪ್ರಣಾಮ ಮಾಡಿರಿ ಹಾಗೂ ನಿಮ್ಮ ವಸ್ತ್ರಗಳನ್ನೂ ತೆಗೆದುಕೊಳ್ಳಿರಿ" ಎಂದನು.

ಆಗ ವ್ರಜ ಕುಮಾರಿಯರು ವಿಚಾರ ಮಾಡಿದರು "ತಾವು ವಸ್ತ್ರ ಹೀನರಾಗಿ ಸ್ನಾನ ಮಾಡಿದ್ದರಿಂದ ತಮ್ಮ ವ್ರತಕ್ಕೆ ಭಂಗ ಬಂದಂತಾಯಿತು. ಆದರೆ ನಿರ್ವಿಘ್ನ ಪೂರ್ತಿಗಾಗಿ ಸಮಸ್ತ ಕರ್ಮಗಳ ಸಾಕ್ಷಿಯಾಗಿ ಶ್ರೀಕೃಷ್ಣನಿಗೇನೇ ನಮಸ್ಕಾರ ಮಾಡೋಣ" ಎಂದು ನಿರ್ಣಯಿಸಿ, ಭಗವಂತನಿಗೆ ನಮಸ್ಕಾರ ಮಾಡಿದರು. ಆಗ ಶ್ರೀಕೃಷ್ಣನ ಹೃದಯದಲ್ಲಿ ಕರುಣೆ ಉಂಟಾಗಿ, ಅವರವರ ವಸ್ತ್ರಗಳನ್ನು ಕೊಟ್ಟು ಬಿಟ್ಟನು. ಶ್ರೀಕೃಷ್ಣನು ಇಷ್ಟೆಲ್ಲ ಸತ್ಯ ಪರೀಕ್ಷೆ ಮಾಡಿ ಅವರನ್ನು ಒರೆಗಲ್ಲಿಗೆ ಹಚ್ಚಿ ತಿಕ್ಕಿದನು. ಅವರು ಚೊಕ್ಕ ಬಂಗಾರದಂತೆ ದೃಢವಾಗಿ ಉಳಿದರು. ಅವರು ವಸ್ತುಗಳನ್ನು ಧರಿಸಿದ ಮೇಲೆಯೂ ಶ್ರೀಕೃಷ್ಣನನ್ನು ಅವಲೋಕಿಸುತ್ತ ಗೊಂಬೆಯಂತೆ ನಿಂತು ಬಿಟ್ಟರು. ಆಗ ಕೃಷ್ಣನು "ನೀವು ನನ್ನ ಪ್ರಾಪ್ತಿಗಾಗಿ ವ್ರತ ಮಾಡಿದಿರಿ. ನೀವು ಪವಿತ್ರರೇ ಇರುವಿರಿ. ಯಾರು ತಮ್ಮ ಮನ, ಪ್ರಾಣಗಳನ್ನು ನನಗೆ ಸಮರ್ಪಣ ಮಾಡುವರೋ, ನನ್ನಲ್ಲಿಯೇ ತಮ್ಮ ಚಿತ್ತವನ್ನು ಇರಿಸುವಿರೋ ಅವರ ಎಲ್ಲ ಕಾಮನೆಗಳು ಪೂರ್ತಿಯಾಗುತ್ತಿವೆ. ನೀವು ಇನ್ನು ಬರುವ ಶರದ್ ಋತುವಿನ ರಾತ್ರಿಯಲ್ಲಿ ನನ್ನ ಹತ್ತಿರ ವಿಹಾರ ಮಾಡಿರಿ" ಎಂದು ಹೇಳಿದನು. *(ಸಶೇಷ)*

## ಶ್ರಾವಣ

ಕಣ ಕಣದಲಿ ಕುಣಿ ಕುಣಿಯುವ ಶ್ರಾವಣಾ,
ಕಣ್ತಣಿಸುವ ಈ ಬನ
ಹಸಿರು ಹಚ್ಚೇ ಪೈರಿನ
ತುಂಬಿ ಬಂತು ತನುಮನ

ಪ್ರಕೃತಿ ನಾರಿ, ರೇಷ್ಮೆ ಸೆರಗು
ಬೆಡಗು ಅದರ ಸೀರೆಗೂ
ಕೃಷ್ಣ ಮೇಘ, ವರ್ಷ-ಗೀತೆ
ನವಿಲು ನೃತ್ಯ ಜೀವಿಗೂ!

ಲೋಕಪ್ರಿಯ, ಮುಂಬಯಿ

## ANNUAL GENERAL BODY MEETING-2011

***Date*** : **Sunday, 28th August, 2011**

***Venue*** : **Devadiga Hall,
Near Kailash Lassi / Park Hotel,
70-A/Hind-Tej Building, 1st Floor,
D. S. Phalke Road, Dadar (E),
Mumbai-400 014**

***Time*** : **10.00 a.m.**

**Souvenir Release by Women Wing**

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2011)*

# ಭಾಸ ಬೋಧ

- ಪ್ರೊ। ವಿಷ್ಣು ಜೋಶಿ, ಕುಮಟಾ

## ಆಪತ್ತುಗಳ ಬಗ್ಗೆ ಮುನ್ನೆಚ್ಚರಿಕೆ ಬೇಕು

**ಪ್ರಾಕ್ಚಿಂತಿತೇನೋಪಾಯೇನ, ಭಾವಿಕಷ್ಟಂ ನಿವರ್ತತೇ।**
**ಕಷ್ಟೇ ಪ್ರಾಪ್ತೇ ಚಿಂತನೇನ ದುಃಖಂ ತು ದ್ವಿಗುಣಂ ಭವೇತ್॥**
**( ಯಜ್ಞಫಲ ಅಂಕ-2, ಶ್ಲೋಕ-13 )**

ಮೊದಲೇ ಮುನ್ನೆಚ್ಚರಿಕೆ ತೆಗೆದುಕೊಂಡರೆ ಬರಲಿರುವ ಆಪತ್ತುಗಳು ತೊಲಗುವವು. ಕಷ್ಟ ಬಂದ ನಂತರ ಅದರ ಬಗ್ಗೆ ವಿಚಾರಿಸಿದರೆ ಕಷ್ಟವು ದ್ವಿಗುಣವಾಗುತ್ತದೆ.

''ಪ್ರಿವೆನ್‌ಶ್ಯನ್ ಈಸ್ ಬೆಟರ್ ದೆನ್ ಕ್ಯೂರ್'' ಅಂದರೆ ರೋಗ ಬಂದ ನಂತರ ಅದನ್ನು ಹೋಗಲಾಡಿಸಲಿಕ್ಕೆ ಹೋರಾಡುವುದಕ್ಕಿಂತ ರೋಗ ಬರದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಒಳ್ಳೆಯದು ಎನ್ನುವ ಸೂಕ್ತಿ ತುಂಬಾ ಪ್ರಸಿದ್ಧ. ಇದೇ ಮಾತನ್ನು ಇನ್ನೊಂದು ರೀತಿಯಲ್ಲಿ ಮಹಾಕವಿ ಭಾಸ ಬಹಳ ಮೊದಲೇ ಹೇಳಿದ್ದಾನೆ. ಆಪತ್ತುಗಳು ಬಂದ ನಂತರ ನಿಭಾಯಿಸುವುದು ಕಷ್ಟ ಆದರೆ ಅವುಗಳು ಬರದೇ ಇರುವಂತೆ ಎಚ್ಚರಿಕೆ ವಹಿಸುವುದು ಜಾಣ್ಮೆ.

ಮುಂಬೈಯಲ್ಲಿ ತಾಜ್, ಓಬೇರಾಯ್ ಹೊಟೇಲುಗಳಿಗೆ ನುಗ್ಗಿದ ಉಗ್ರರು ಪ್ರಳಯವನ್ನೇ ಸೃಷ್ಟಿಸಿದರು. ಇದರ ಬಗ್ಗಾಗಿ ಮೀನುಗಾರರು ಅಧಿಕೃತವಾಗಿ ನೀಡಿದ ಮಾಹಿತಿಯನ್ನು ಪರಿಶೀಲಿಸಿ ಮುನ್ನೆಚ್ಚರಿಕೆ ತೆಗೆದುಕೊಂಡರೆ ಬರಲಿರುವ ಆಪತ್ತು ತೊಲಗುತ್ತಿತ್ತು. ಅಮೂಲ್ಯವಾದ ವಿತ್ತ ಜೀವಿತಗಳು ಉಳಿಯುತ್ತಿದ್ದವು. ರಾಜ್ಯದಲ್ಲಿ ಉಪಲಬ್ಧವಿರುವ ವಿದ್ಯುತ್ ಎಷ್ಟು? ಅವಶ್ಯವಿರುವುದೆಷ್ಟು? ಕೊರತೆಯ ಪ್ರಮಾಣ ಎಷ್ಟು? ಎನ್ನುವುದನ್ನು ಆಡಳಿತದ ಹೊಣೆ ಹೊತ್ತ ಸರ್ಕಾರ ಮೊದಲೇ ಯೋಚಿಸಿ ಕಾರ್ಯಪ್ರವೃತ್ತರಾಗಿದ್ದರೆ, ಸರಕಾರಕ್ಕೆ ಅಪಕೀರ್ತಿಯೂ ತಪ್ಪುತ್ತಿತ್ತು. ಪ್ರಜೆಗಳಿಗೆ ಅನುಕೂಲವೂ ಆಗುತ್ತಿತ್ತು. ಇಂತಹ ಸಂದರ್ಭದಲ್ಲಿ ಭಾಸಬೋಧ ಹೌದು ಎನ್ನಿಸುತ್ತದೆ. ಭಾಸ ಮಹಾಕವಿ ಇನ್ನಷ್ಟು ಹತ್ತಿರಕ್ಕೆ ಹತ್ತಿರಕ್ಕೆ ಬಂದಂತೆ ಅನ್ನಿಸುತ್ತದೆ.

ಜೀವನದಲ್ಲಿ ಕೆಲವೊಮ್ಮೆ ಸುಖಗಳು ಹೇಗೆ ಅನಿರೀಕ್ಷಿತವೋ ಆಪತ್ತುಗಳ ಆಕ್ರಮಣವೂ ಸಹ ಅಷ್ಟೇ ಅನಿರೀಕ್ಷಿತ. ಆದರೆ ಬರಲಿರುವ ಆಪತ್ತುಗಳನ್ನು ಊಹಿಸಿ ಬುದ್ಧಿವಂತ ಮನುಷ್ಯ ಮೊದಲೇ ಜಾಗೃತನಾಗುತ್ತಾನೆ. ಹಾಗೂ ಭವಿಷ್ಯದ ಆಪತ್ತುಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುತ್ತಾನೆ. ಈಗ ಆಪತ್ತುಗಳು ಬಂದರೂ ಅವುಗಳಿಗೆ ಪ್ರತೀಕಾರ ಸಿದ್ಧವಾಗಿರುವುದರಿಂದ ಆಪತ್ತುಗಳ ದಾಳಿ ಅಷ್ಟೊಂದು ಬರ್ಬರ ಎನ್ನಿಸಲಾರದು.

**''ಅವಿವೇಕಃ ವರಂ ಅಪದಾಂ ಪದಮ್''**
(ಮಹಾಕವಿ ಭಾರವಿ-ಕಿರಾತಾರ್ಜುನೀಯಮ್-2-30)

ಎಲ್ಲ ಆಪತ್ತುಗಳಿಗೂ ಅವಿವೇಕ ಹಾಗೂ ಅಜಾಗರೂಕತೆಯೇ ಸಮೃದ್ಧ ಭೂಮಿಕೆಯಂತೆ. ಆದಕಾರಣ ಬರಲಿರುವ ಆಪತ್ತುಗಳನ್ನು ವ್ಯವಹಾರಿಕವಾಗಿ ಎದುರಿಸಲು

**''ಅಪದರ್ಥಂ ಧನಂ ರಕ್ಷೇತ್''**
(ಹಿತೋಪದೇಶ-1-42)

ಆಪತ್ತುಗಳು ಬರಬಹುದು. ಅವುಗಳು ಬಂದಾಗ ಎದುರಿಸಲು ಮನುಷ್ಯರು ಕೈಲಾದದ್ದು ಉಳಿತಾಯ ಮಾಡಬೇಕು. ಕೂಡಿಟ್ಟ ಹಣ ಆಪತ್ಕಾಲಕ್ಕೆ ಬರುತ್ತದೆ. ಇದು ಆಪತ್ತುಗಳ ಬಗ್ಗೆ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಯೇ ಅಗಿದೆ.

**''ಆಪದಾಂ ಆಪತಂತೀನಾ ಹಿತೋಽಽವ್ಯಾಯಾತಿ ವಿಕ್ರಿಯಾಮ್''**
(ಹಿತೋಪದೇಶ-1-30)

ಅಂದರೆ ಆಪತ್ತುಗಳು ಬರುತ್ತಿರಲು ನಮಗೆ ಅನುಕೂಲವಾಗಿದ್ದವರೂ ಬದಲಾಗಿಬಿಡುತ್ತಾರೆ. ನಮ್ಮ ಆಪತ್ತುಗಳಲ್ಲಿ ಕೊನೆಯವರೆಗೆ ಇನ್ನೊಬ್ಬರು ನಿಲ್ಲುತ್ತಾರೆ ಎನ್ನುವುದು ಸುಳ್ಳು. ಯಾಕೆಂದರೆ ಅವರಿಗೂ ಅವರದೇ ಆದ ಇತಿ-ಮಿತಿ-ತೊಂದರೆಗಳು ಇರುತ್ತವೆ. ನಮಗೆ ಆಪತ್ತುಗಳು ಬಂದಾಗ ನಾವೇ ಅವುಗಳನ್ನು ಎದುರಿಸಬೇಕು. ಆದರೆ-



**''ನ ಹಿ ವ್ಯಸನಮಾಸಾದ್ಯ ಸೀದಂತಿ ಕೃತಬುದ್ಧಯಃ''**
(ಮಹಾಭಾರತ 14,32-22)

ಆಪತ್ತುಗಳು ಬಂದಾಗ ಧೀರರು ಮಾತ್ರ ಧೃತಿಗೆಡುವುದಿಲ್ಲವಂತೆ. ಆದ್ದರಿಂದಲೇ

**''ಧಿರಾಹಿ ತರಂತ್ಯಾಪದಃ''**
(ಮಹಾಕವಿ ಬಾಣಭಟ್ಟ-ಕಾದಂಬರಿ)

ಧೈರ್ಯವಂತರು ಮಾತ್ರ ಆಪತ್ತುಗಳಿಂದ ಪಾರಾಗುತ್ತಾರೆ. ಆಪತ್ತುಗಳು ಒಂದೇ ಬರುವುದಿಲ್ಲ. ಹಿಂಡು ಹಿಂಡಾಗಿ ಬರುತ್ತದೆ. ಆಪತ್ತಿನಲ್ಲಿ ಸಿಲುಕಿದವನಿಗೆ ಪರಿಸ್ಥಿತಿ ಪ್ರತಿಕೂಲ ಆಗಿರುತ್ತದೆ.

**''ಆಪತ್ಸತು ವೈರಾಣಿ ಸಮುದ್ಧವಂತಿ''**
(ಪಂಚತಂತ್ರ 2-12)

ಆಪತ್ತುಗಳು ಬಂದಾಗ ವೈರಗಳೂ ಹುಟ್ಟಿಕೊಳ್ಳುತ್ತವೆ. ಇಂತಹ ಆಪತ್ತುಗಳ ಬಗ್ಗೆ ಸಹಾ ಜಾಗೃತರಾಗಿರಬೇಕು. ಅಲಕ್ಷ್ಯ, ಅವಿವೇಕ, ಆಲಸ್ಯಗಳಿಂದ ಆಪತ್ತುಗಳ ಆಕ್ರಮಣ ಸುಲಭ ಆಗುತ್ತದೆ.

**''ತಸ್ಮಾತ್ ಜಾಗೃತ-ಜಾಗೃತ''**




*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2009)*

# ELECTION NOTICE - 2011

I have been nominated as Hon.Returning Officer and authorised to conduct the election of eight members to the Managing Committee for a term of two years i.e. for 2011-12 & 2012 – 13 for the vacancies caused by retirement of eight members, viz. Shri N.R.Hegde, Shri Narayan Akadas, Shri R.M.Shastri, Shri. A.G.Bhat , Shri. A.K.Bhat, Smt. Shashikala Hegde, Smt. Uma Swamy & Shri. Sathishkumar K.C. However, they are eligible for re- election. The details are as follows:-

1. Receiving the duly completed nomination forms upto 4.00p.m. on 18 August 2011 at Havyaka Office, Kalina.
2. Receiving written request of withdrawal latest by 4.00 p.m. on 22nd August 2011 at Havyaka Office Kalina.
3. Scrutiny of nomination forms, preparing the final list of candidates & displaying the same on the Notice Board of Havyaka Office , Kalina on 26th August 2011.
4. Election to be held, if required, during the Annual General Body Meeting on 28th August 2011. Decision of the Hon. Returning Officer shall be final and binding on all the members so far as Election matters are concerned.
5. Declaration of the Election result.
6. For smooth conducting of the Election the Returning Officer may take the assistance / help of the volunteers.
7. The members are earnestly requested to co-operate in all the respects.
8. The Nomination Forms are available at Kalina and Dombivli offices during office hours up to 4.00 p.m.

Mumbai — Sd/-
Date 20th July 2011 — (G. V. Bhagwat )
*Hon. Returning Officer*


## ವರ ಬೇಕಾಗಿದೆ

**ಉತ್ತರ ಕನ್ನಡ ಮೂಲದ ವಿಶ್ವಾಮಿತ್ರ ಗೋತ್ರದ, ಶ್ರವಣ ನಕ್ಷತ್ರ, ಮಕರ ರಾಶಿ, 24 ವರ್ಷದ 5'3'' ಎತ್ತರದ BHMS ಮಾಡಿ, Post graduation in Clinical Research & Management ಮಾಡುತ್ತಿರುವ ಸುಸಂಸ್ಕೃತ ಮನೆತನದ ಗೌರವರ್ಣದ ಹುಡುಗಿಗೆ B.E./M.B.A./M.Tech./M.S.ಮಾಡಿ ಕೆಲಸದಲ್ಲಿರುವ (ಬೆಂಗಳೂರು, ಮುಂಬಯಿ, ವಿದೇಶಿ) 29 ವರ್ಷದೊಳಗಿನ ಸುಸಂಸ್ಕೃತ ಮನೆತನದ ವರ ಬೇಕಾಗಿದ್ದಾನೆ.**
***ಸಂಪರ್ಕಿಸಿರಿ*** **: (08322)413594/09922994520**




## ಚಿಂತನ – ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ| ಪಿ. ಎಂ. ಹೆಗಡೆ, ಶಿರಸಿ**

## ಗೆಲ್ಲಲು ಬಂದವ ಗೆಲ್ಲಲ್ಪಟ್ಟ

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಓರ್ವ ಎಲ್ವಿನ್ ಎಂಬ ಹೆಸರಿನ ಪಾದ್ರಿ ಭಾರತಕ್ಕೆ ಬಂದ. ಬರುವಾಗ ಅವನ ಮನಸ್ಸಿನ ತುಂಬ ಭಾರತದ ಬಗ್ಗೆ ಅವನು ಇಂಗ್ಲೆಂಡಿನಲ್ಲಿ ಕೇಳಿದ ಅಪಪ್ರಚಾರಗಳೇ ಮನೆ ಮಾಡಿದ್ದವು. ಭಾರತದ ಜನರು ಅನಾಗರಿಕರು. ಹಾವು, ಪ್ರಾಣಿ, ಕಲ್ಲುಗಳನ್ನು ಪೂಜಿಸುವವರು. ಅವರ ಪುರಾತನ ಗ್ರಂಥಗಳು ಕೂಡ ಜಾರ-ಜಾರೆಯರ ಕಥೆಗಳನ್ನೇ ಒಳಗೊಂಡಿವೆ. ಇಂತಹ ಜನರಿಗೆ ಧರ್ಮ, ನೀತಿ ದೇವರುಗಳ ಬಗ್ಗೆ ಸರಿಯಾದ ಶಿಕ್ಷಣ ಕೊಡಬೇಕಾದರೆ ಅವರನ್ನು ಕ್ರಿಶ್ಚಿಯನ್ನರಾಗಿ ಮತಾಂತರಿಸಿ ಏಸುವು ತೋರಿಸಿದ ದಾರಿಯಲ್ಲಿ ನಡೆಯುವಂತೆ ಮಾಡಿ, ಅವರನ್ನು ಉದ್ಧರಿಸಬೇಕೆಂಬ ಘನವಾದ ಉದ್ದೇಶದಿಂದ ಗಾಂಧೀಜಿಯವರ ಆಶ್ರಮಕ್ಕೆ ಹೋದನು. ಗಾಂಧೀಜಿಯವರಿಗೆ ತನ್ನ ಭಾರತಕ್ಕೆ ಬರುವಿಕೆಯ ಉದ್ದೇಶವನ್ನು ಅರುಹಿ ಕಾರ್ಯಪ್ರವೃತ್ತನಾಗಬೇಕೆಂದು. ಗಾಂಧೀಜಿಯವರಿಗೆ ತನ್ನೆಲ್ಲ ವಿಚಾರಗಳನ್ನು ತಿಳಿಸಿದ. ಆಗ ಗಾಂಧೀಜಿ, ಅವನು ಕಾರ್ಯಪ್ರವೃತ್ತನಾಗುವ ಮೊದಲು ಭಾರತದ ನಿಜವಾದ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಲು ಸೂಚಿಸಿದರು. ಗಾಂಧೀಜಿಯವರ ಮಾತನ್ನು ಒಪ್ಪಿ ಭಾರತದ ನಾನಾ ಭಾಗಗಳಿಗೆ ಭೇಟಿಯಿತ್ತು, ಪಂಡಿತ-ಪಾಮರರನ್ನೆಲ್ಲ ಸಂಪರ್ಕಿಸಿ, ಇಲ್ಲಿಯ ಶ್ರೇಷ್ಠ ಗ್ರಂಥಗಳು, ಹಬ್ಬ-ಹರಿದಿನಗಳು, ಇಲ್ಲಿಯ ಆದಿವಾಸಿಗಳು, ಮಠ-ಮಾನ್ಯಗಳು, ಗುಡಿಗಳು ಎಲ್ಲವನ್ನೂ ಪರಿಚಯಿಸಿಕೊಂಡ.

ನಂತರ ಮಾನಸಿಕವಾಗಿ ಅವನೇ ಪರಿವರ್ತನೆಗೊಂಡ. ಪುರಾತನ ಭಾರತೀಯರು ಆಧ್ಯಾತ್ಮಲೋಕಕ್ಕೆ ಕೊಟ್ಟ ಕೊಡುಗೆ, ಇಲ್ಲಿಯ ಋಷಿ-ಮುನಿಗಳ ಆಧ್ಯಾತ್ಮಿಕ ಬಲ, ಬ್ರಹ್ಮ, ವಿಷ್ಣು ಮಹೇಶ್ವರರ ಸಾಂಕೇತಿಕ ಅಂತರಾರ್ಥ, ಇಲ್ಲಿಯ ವೈವಿಧ್ಯಮಯ ಜೀವನಕ್ಕೆ ಮಾರು ಹೋಗಿ ಬಿಹಾರದ ಆದಿವಾಸಿಗಳ ನಡುವೆ ನೆಲೆಸಿ ಅವರ ಜೀವನ ಮಟ್ಟವನ್ನು ಸುಧಾರಿಸಲು ತನ್ನಿಂದಾದದ್ದೆಲ್ಲವನ್ನೂ ಮಾಡಿದ. ಅಷ್ಟೇ ಏಕೆ, ಆದಿವಾಸಿ ಮಹಿಳೆಯೋರ್ವಳನ್ನು ಮದುವೆ ಮಾಡಿಕೊಂಡ.

ಭಾರತಕ್ಕೆ ಬೇಕಾದುದು ಮತಾಂತರವಲ್ಲ. ಇಲ್ಲಿಯ ಸಾರ್ವಕಾಲಿಕವಾದ ಧರ್ಮದ, ಸಂಸ್ಕೃತಿಯ ರಕ್ಷಣೆ. ಇದನ್ನು ರಕ್ಷಿಸುವ ಕಾರ್ಯವನ್ನು ಜನ ಮಾಡಬೇಕು. ಭಾರತದಂತಹ ವೈವಿಧ್ಯಮಯ ದೇಶ ಮತ್ತೊಂದಿಲ್ಲ. ಅನೇಕ ಭಾಷೆ, ಜಾತಿ, ಪಂಗಡಗಳ ಮಧ್ಯದಲ್ಲೂ ಒಂದು ಏಕತೆಯಿದೆ ಎಂಬುದನ್ನು ಕಂಡುಕೊಂಡ. ಈ ಜನರ ಧರ್ಮ, ಸಂಸ್ಕೃತಿಯಿಂದ ಅನ್ಯರು ಕಲಿಯಬೇಕಾಗಿದೆಯೇ ಹೊರತು, ಅನ್ಯರು ಇವರಿಗೆ ಕಲಿಸಬೇಕಾದದ್ದು ಏನೂ ಇಲ್ಲ ಎಂಬುದು ಅವನ ಅಭಿಪ್ರಾಯವಾಯಿತು. ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ ಎಂದು ಬುದ್ಧನ ಬಗ್ಗೆ ಹೇಳಿದ ಮಾತು ಭಾರತಕ್ಕೆ ಎಷ್ಟು ಆಳವಾಗಿ ಅನ್ವಯಿಸುತ್ತದೆ ! ಬೇರೆ ಬೇರೆ ದೇಶಗಳ ಪುರಾತನ ಪರಂಪರೆ, ಸಂಸ್ಕೃತಿಗಳು ನಾಶವಾಗಿ ಹೋದರೂ ಭಾರತದ ಸಂಸ್ಕೃತಿ ಎಂತಹ ಆಕ್ರಮಣಗಳಿಗೆ ಒಳಗಾದರೂ ತಳವೂರಿ ನಿಂತಿದ್ದು ಅದ್ಭುತ ಐತಿಹಾಸಿಕ ಸತ್ಯವಲ್ಲವೇ?

*PAGE DONATED BY :* ***SHRI V. G. BHAT, NIGDI*** *(DEC.-2011)*

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*( ಹಿಂದಿನ ಸಂಚಿಕೆಯಿಂದ )*

**ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು**

ನನ್ನ ಮೇಲೆ ಕನಿಕರಗೊಂಡ ಇಂಗ್ಲಿಷ್ ಸಹ ಪ್ರಯಾಣಿಕರೊಬ್ಬರು ನನ್ನನ್ನು ಮಾತಿಗೆಳೆದರು. ವಯಸ್ಸಿನಲ್ಲಿ ನನಗಿಂತ ಹಿರಿಯರಾಗಿದ್ದ ಅವರು ನಾನು ಯಾರು? ಎಲ್ಲಿಗೆ ಹೋಗುತ್ತಿದ್ದೇನೆ? ಯಾವ ಕಾರಣಕ್ಕೆ? ನಾನೇನು ತಿಂದೆ? ಯಾಕಿಷ್ಟು ಸಂಕೋಚ? ಎಂದೆಲ್ಲಾ ಆತ್ಮೀಯವಾಗಿ ವಿಚಾರಿಸಿದರು. ಊಟದ ಮೇಜಿಗೇ ಬರಬೇಕೆಂದು ಒತ್ತಾಯಿಸಿದರು. ಮಾಂಸ ತಿನ್ನುವುದಿಲ್ಲವೆಂಬ ನನ್ನ ಶಪಥವನ್ನು ಕೇಳಿ ನಸುನಕ್ಕ ಅವರು, ಇಲ್ಲಿಯವರೆಗೆ ಎಲ್ಲಾ ಸರಿ. ಆದರೆ ಬಿಸ್ಕೆಕೊಲ್ಲಿಯನ್ನು ತಲುಪಿದ ತಕ್ಷಣ ನೀನು ನಿನ್ನ ನಿರ್ಧಾರವನ್ನು ಬದಲಾಯಿಸಿಕೊಳ್ಳಲೇ ಬೇಕಾಗುತ್ತದೆ. ಇಂಗ್ಲೆಂಡಿನಲ್ಲಿ ಎಷ್ಟು ಚಳಿ ಎಂದರೆ ಮಾಂಸವಿಲ್ಲದೆ ಬದುಕುವುದೇ ಕಷ್ಟ ಎಂದರು.

ಮಾಂಸಾಹಾರವಿಲ್ಲದೆಯೂ ಬದುಕಬಹುದೆಂದು ಕೇಳಿದ್ದೇನೆ. ನಾನು ಮಾಂಸ ಮುಟ್ಟುವುದಿಲ್ಲವೆಂದು ನಮ್ಮ ತಾಯಿಗೆ ಮಾತು ಕೊಟ್ಟಿದ್ದೇನೆ. ಒಂದು ವೇಳೆ ಮಾಂಸವಿಲ್ಲದೆ ಬದುಕುವುದೇ ಅಸಾಧ್ಯ ಎಂದಾದರೆ ನಾನು ಮರಳಿ ಭಾರತಕ್ಕೆ ಹೋಗುತ್ತೇನೆಯೇ ಹೊರತು ಮಾಂಸವನ್ನಂತೂ ಮುಟ್ಟುವುದಿಲ್ಲ ಎಂದೆ. ‘ಅದು ಶುದ್ಧ ಸುಳ್ಳು. ಮಾಂಸ ತಿನ್ನದೆ ಯಾರೂ ಬದುಕಿಲ್ಲ. ನಾನು ಮದ್ಯಪಾನ ಮಾಡುತ್ತೇನೆ. ಆದರೂ ನಿನ್ನನ್ನು ಕುಡಿ ಎನ್ನುತ್ತಿಲ್ಲ. ಆದರೆ ನೀನು ಮಾಂಸ ತಿನ್ನಲೇ ಬೇಕು. ಅದಿಲ್ಲದೆ ಬದುಕಲಾರೆ’ ಎಂದರು ಅವರು.

ನಾವು ಬಿಸ್ಕೇಕೊಲ್ಲಿ ತಲುಪಿದೆವು. ನನಗೆ ಮಾಂಸ, ಮದ್ಯದ ಅಗತ್ಯ ಕಂಡು ಬರಲಿಲ್ಲ. ನನ್ನ ಮನೆಯವರ ಅಪೇಕ್ಷೆಯಂತೆ ‘ನಾನು ಮಾಂಸಾಹಾರ ಮಾಡಿಲ್ಲ’ ಎಂಬ ಪುರಾವೆ ಒದಗಿಸಲು ಒಂದು ಪ್ರಮಾಣಪತ್ರ ನೀಡುವಂತೆ ನಾನು ಆ ಹಿರಿಯರನ್ನು ಕೋರಿದೆ. ಅವರು ಸಂತೋಷದಿಂದ ಬರೆದುಕೊಟ್ಟರು. ಬಹುಕಾಲ ಅದನ್ನು ಜೋಪಾನವಾಗಿ ಇಟ್ಟುಕೊಂಡಿದ್ದೆ. ಮಾಂಸ ತಿಂದರೂ ಅಂತಹ ಪ್ರಮಾಣ ಪತ್ರವನ್ನು ಸಂಗ್ರಹಿಸಬಹುದು ಎಂಬ ವಿಚಾರ ಹೊಳೆದಾಗ ಅದರ ಮೋಹ ಹೊರಟು ಹೋಯಿತು. ನನ್ನ ಮಾತನ್ನು ನಂಬದಿದ್ದ ಮೇಲೆ ಅಂಥ ಪ್ರಮಾಣ ಪತ್ರಗಳಿಂದ ಏನು ಪ್ರಯೋಜನ ಎನಿಸಿದಾಗ ಅದನ್ನು ಹರಿದು ಹಾಕಿದೆ.

ಅಂತೂ ಇಂತೂ ನಾವು ಸೌತಂಪ್ಟನ್ ತಲುಪಿದೆವು. ಅಂದು ಶನಿವಾರ. ಹಡಗಿನಲ್ಲಿರುವಾಗ ನಾನು ಕಪ್ಪು ಬಟ್ಟೆಗಳನ್ನು ತೊಟ್ಟಿದ್ದೆ. ಬಿಳಿ ಬಟ್ಟೆ ನನಗೆ ಚೆನ್ನಾಗಿ ಒಪ್ಪುತ್ತದೆ ಎಂದುಕೊಂಡು ಹಡಗಿನಿಂದ ಇಳಿಯುವಾಗ ಅದನ್ನೇ ಧರಿಸಿದೆ. ಅಂದು ಸೆಪ್ಟಂಬರ್ ತಿಂಗಳ ಕೊನೆಯ ದಿನ. ಅಂದು ಅಂತಹ ಉಡುಪು ತೊಟ್ಟವನು ನಾನೊಬ್ಬನೇ. ಎಲ್ಲರಂತೆ ನಾನೂ ನನ್ನ ಪೆಟ್ಟಿಗೆ, ಇತರ ಸಾಮಾನು ಸರಂಜಾಮುಗಳನ್ನು ಬೀಗದಕೈ ಸಮೇತ ಗ್ರಿಂಡ್ಲೇ ಕಂಪೆನಿಯ ಏಜೆಂಟನ ಕೈಗೆ ಕೊಟ್ಟುಬಿಟ್ಟೆ. ಡಾ। ಪ್ರಾಣಜೀವನ್ ಮೆಹತಾ, ದಳಪತರಾಮ್ ಶುಕ್ಲ, ಪ್ರಿನ್ಸ್ ರಣಜಿತ್ ಸಿಂಗ್ ಹಾಗೂ ದಾದಾಭಾಯಿ ನವರೋಜಿಯವರಿಗೆ ನನ್ನ ಸ್ನೇಹಿತರು ಇತ್ತಿದ್ದ ಪರಿಚಯ ಪತ್ರಗಳು ನನ್ನ ಬಳಿ ಇದ್ದವು. ನಾನು ಡಾ। ಮೆಹತಾ ಅವರಿಗೆ ತಂತಿ ಕಳುಹಿಸಿದೆ. ಲಂಡನ್‌ನಲ್ಲಿ ವಿಕ್ಟೋರಿಯಾ ಹೊಟೇಲಿನಲ್ಲಿ ಉಳಿದುಕೊಳ್ಳಬೇಕೆಂದು ಹಡಗಿನಲ್ಲಿ ಯಾರೋ ಸಲಹೆ ಮಾಡಿದರು. ನಾನು, ಮಜುಂದಾರ್ ಹಾಗೇ ಮಾಡಿದೆವು. ನಾನೊಬ್ಬನೇ ಬಿಳಿ ಬಟ್ಟೆ ಧರಿಸಿದ್ದುದರಿಂದ ತುಂಬಾ ಮುಜುಗರವಾಯಿತು. ಮರುದಿನ ಭಾನುವಾರವಾದ್ದರಿಂದ ಗ್ರಿಂಡ್ಲೇ ಕಂಪೆನಿಯಿಂದ ನಮ್ಮ ಸಾಮಾನುಗಳು ಬರುವುದಿಲ್ಲ ಎಂದು ಗೊತ್ತಾದಾಗಲಂತೂ ಇನ್ನೂ ಕೆಡುಕೆನಿಸಿತು.

ನನ್ನ ತಂತಿ ತಲುಪಿ, ಅಂದೇ ಸಾಯಂಕಾಲ ಡಾ। ಮೆಹತಾ ನನ್ನನ್ನು ನೋಡಲು ಬಂದರು. ನನ್ನ ಬಿಳಿ ಬಟ್ಟೆಗಳನ್ನು ನೋಡಿ ಅವರಿಗೆ ನಗು ಬಂತು. ಮಾತನಾಡುತ್ತಿರುವಾಗ ನಾನು ಅವರ ಟೋಪಿಯನ್ನು ತೆಗೆದುಕೊಂಡು ಅದೆಷ್ಟು ಮೃದುವಾಗಿದೆ ಎಂದು ಸವರಿ ನೋಡಿದೆ. ವಿರುದ್ಧ ದಿಕ್ಕಿನಲ್ಲಿ ಸವರಿದ್ದರಿಂದ ಅದರ ಉಣ್ಣೆಯೆಲ್ಲಾ ಎದ್ದು ನಿಂತು ಒಂದು ರೀತಿಯಲ್ಲಿ ವಿಕಾರವಾಗಿ ವಿರೂಪವಾಗಿ ಹೋಯಿತು. ಮೆಹತಾ ಅವರು ನನ್ನನ್ನು ತಡೆಯುವಷ್ಟರಲ್ಲಿ ತಪ್ಪು ನಡೆದುಹೋಗಿತ್ತು. ಅದು ನನಗೆ ಒಂದು ರೀತಿಯ ಎಚ್ಚರಿಕೆಯೂ ಆಯಿತು. ಡಾ। ಮೆಹತಾ ಆಂಗ್ಲರ ರೀತಿನೀತಿಗಳ ಬಗ್ಗೆ ನನಗೆ ತಿಳಿವಳಿಕೆಯ ಪಾಠ ಹೇಳಿದರು. ಯಾರ ಪದಾರ್ಥಗಳನ್ನೂ ಮುಟ್ಟಬಾರದು. ಭಾರತದಲ್ಲಿ ಕೇಳುವಂತೆ ಮೊದಲ ಪರಿಚಯದಲ್ಲೇ ಪ್ರಶ್ನೆಗಳನ್ನು ಕೇಳಬಾರದು. ಗಟ್ಟಿಯಾಗಿ ಮಾತನಾಡಬಾರದು. ಯಾರನ್ನೂ ಸರ್ ಎಂದು ಸಂಬೋಧಿಸಬಾರದು. ಅದು ಸೇವಕರು ಮನೆಯ ಮಾಲೀಕನನ್ನು ಸಂಬೋಧಿಸುವ ರೀತಿ ಎಂದೆಲ್ಲಾ ತಿಳಿ ಹೇಳಿದರು. ಅದು ನನಗೆ ಒಂದರ್ಥದಲ್ಲಿ ಯುರೋಪಿಯನ್ ನಡೆವಳಿಕೆಯ ಪ್ರಥಮ ಪಾಠವಾಯಿತು. ಹೊಟೇಲಿನಲ್ಲಿ ಖರ್ಚು ವೆಚ್ಚ ಹೆಚ್ಚು. ಯಾವುದಾದರೂ ಮನೆಯಲ್ಲಿ ಕೊಠಡಿ ಬಾಡಿಗೆಗೆ ಪಡೆಯುವುದು ಉತ್ತಮ ಎಂದು ಅವರು ಸಲಹೆ ಮಾಡಿದರು. ನಮಗೂ ಅದೇ ಸರಿ ಎನಿಸಿತು.

ಹಡಗಿನಲ್ಲಿ ಮಾಲ್ವಾದ ಸಿಂಧಿ ಪ್ರವಾಸಿಯೊಬ್ಬ ಮಜುಂದಾರರಿಗೆ ಚೆನ್ನಾಗಿ ಪರಿಚಯವಾಗಿದ್ದ. ಅವನು ಲಂಡನ್‌ಗೆ ಹೊಸಬನಾಗಿರಲಿಲ್ಲ. ನಮ್ಮಿಬ್ಬರಿಗೂ ಬಾಡಿಗೆ ಕೊಠಡಿಗಳನ್ನು ಹುಡುಕಿಕೊಡುವುದಾಗಿ ತಿಳಿಸಿದ್ದ. ಸೋಮವಾರ ನಮ್ಮ ಸಾಮಾನು ಬಂದ ಕೂಡಲೇ ಹೊಟೇಲ್ ಬಿಲ್ ಕೊಟ್ಟು, ಆತ ಗೊತ್ತು ಮಾಡಿದ ಕೊಠಡಿಗೆ ಹೋದೆವು. ಹೊಟೇಲ್‌ನಲ್ಲಿ ನನ್ನ ಪಾಲಿಗೆ ಮೂರು ಪೌಂಡ್ ಬಿಲ್ ಬಂದಿತ್ತು. ವಾಸ್ತವವಾಗಿ ಯಾವುದೂ ರುಚಿಸಿರಲಿಲ್ಲ. ಹಾಗಾಗಿ ನಾನು ಏನನ್ನೂ ತಿನ್ನದೇ ಉಪವಾಸವೇ ಇದ್ದೆ. ಅಷ್ಟಾದರೂ ಅಂಥ ದುಬಾರಿ ಬಿಲ್ ಬಂದಿದ್ದರಿಂದ ನನಗೆ ನಿಜಕ್ಕೂ ದಿಗ್ಭ್ರಮೆಯಾಯಿತು. ಒಂದು ತಿನಿಸು ಇಷ್ಟವಾಗದಿದ್ದಾಗ ನಾನು ಮತ್ತೊಂದನ್ನು ತರಿಸುತ್ತಿದ್ದೆ. ಅದೂ ಸೇರುತ್ತಿರಲಿಲ್ಲ. ಆದರೂ ನಾನು ಎರಡಕ್ಕೂ ಬಿಲ್ ತೆರಬೇಕಾಗುತ್ತಿತ್ತು. ಇಲ್ಲಿಯ ವರೆಗೂ ನನಗೆ ಮುಂಬಯಿನಿಂದ ತಂದಿದ್ದ ತಿನಿಸುಗಳೇ ಆಧಾರವಾಗಿದ್ದವು. ಆದರೂ ದುಬಾರಿ ಬಿಲ್ ತೆರುವುದು ಮಾತ್ರ ತಪ್ಪಲಿಲ್ಲ.

ಹೊಸ ಕೊಠಡಿಯಲ್ಲೂ ನನಗೆ ಶಾಂತಿ, ನೆಮ್ಮದಿ, ಸಿಗಲಿಲ್ಲ. ನನಗೆ ಸದಾ ನನ್ನ ತಾಯಿಯ ಪ್ರೀತಿ ವಿಶ್ವಾಸ, ಮನೆ, ದೇಶದ್ದೇ ನೆನಪು. ರಾತ್ರಿಗಳಲ್ಲಂತೂ ಕಣ್ಣೀರ ಕೋಡಿಯೇ ಹರಿಯುತ್ತಿತ್ತು. ಮನೆಯ ನೆನಪಿನಿಂದಾಗಿ ನಿದ್ರೆಯೇ ಬರುತ್ತಿರಲಿಲ್ಲ. ನಾನು ಯಾರೊಂದಿಗೂ ನನ್ನ ಕಷ್ಟ ಸುಖಗಳನ್ನು ಹಂಚಿಕೊಳ್ಳಲಾಗುತ್ತಿರಲಿಲ್ಲ. ಒಂದು ವೇಳೆ ಹೇಳಿಕೊಂಡಿದ್ದರೂ ಪ್ರಯೋಜನವಾಗುತ್ತಿರಲಿಲ್ಲ. ನನಗೆ ಏನು ಬೇಕು ಎಂಬುದು ನನಗೇ ಗೊತ್ತಾಗುತ್ತಿರಲಿಲ್ಲ. ಅಲ್ಲಿ ನನ್ನನ್ನು ಸಮಾಧಾನಗೊಳಿಸುವ ಯಾವ ವಿಷಯವೂ ಇರಲಿಲ್ಲ. ಜನ, ಅವರ ರೀತಿ-ನೀತಿ, ಮನೆ-ಮಠ ಎಲ್ಲವೂ ಹೊಸದೇ. ಇಂಗ್ಲಿಷರ ನಡೆವಳಿಕೆ ನನಗೆ ತುಂಬಾ ಅಪರಿಚಿತವಾಗಿತ್ತು. ಹಾಗಾಗಿ ಯಾವಾಗಲೂ ಎಚ್ಚರಿಕೆಯಿಂದಲೇ ಇರಬೇಕಾಗುತ್ತಿತ್ತು. ಜೊತೆಗೆ ಸಸ್ಯಾಹಾರದ ಶಪಥ ಬೇರೆ. ನನ್ನ ಆಹಾರ, ಪಾನೀಯಗಳ ವಿಷಯದಲ್ಲಿ ನಾನು ಸದಾ ಜಾಗರೂಕನಾಗಿಯೇ ಇರುತ್ತಿದ್ದೆ. ನಾನು ತಿನ್ನಬಹುದಾಗಿದ್ದ ಪದಾರ್ಥಗಳೂ ನೀರಸವಾಗಿ, ನಾಲಿಗೆಗೆ ರುಚಿಸುತ್ತಿರಲಿಲ್ಲ. ಹಾಗಾಗಿ ನಾನು ಬೆಂಕಿಯಲ್ಲಿ ಬಿದ್ದ ಚಿಟ್ಟೆಯಂತೆ ಒದ್ದಾಡುತ್ತಿದ್ದೆ. ಇಂಗ್ಲೆಂಡ್ ಯಾವುದೇ ರೀತಿಯಲ್ಲೂ ನನಗೆ ಸಹನೀಯ ಎನಿಸಲಿಲ್ಲ. ಈಗ ಬಂದಿದ್ದಾಗಿದೆ. ಹೇಗಾದರೂ ಸರಿ, ಮೂರು ವರ್ಷಗಳನ್ನು ಮುಗಿಸಲೇಬೇಕು ಎಂದು ನನ್ನ ಅಂತರಾತ್ಮ ಹೇಳುತ್ತಿತ್ತು.

*(ಮುಂದುವರಿಯುವುದು)*


## ವಧು ಬೇಕಾಗಿದೆ

ಉತ್ತರ ಕನ್ನಡ ಮೂಲದ ಮುಂಬಯಿಯಲ್ಲಿ ನೆಲೆಸಿರುವ ಸೋಫ್ಟ್‌ವೇರ್ ಇಂಜಿನಿಯರ್, 5’8½’’ ಎತ್ತರದ ವರನಿಗೆ ಬಿ.ಇ. ಅಥವಾ ಡಬಲ್ ಗ್ರ್ಯಾಜ್ಯುವೇಟಾಗಿರುವ 5’4’’ಎತ್ತರವಿರುವ ಸುಂದರ ವಧು ಬೇಕಾಗಿದ್ದಾಳೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ: ಮೊಬೈಲ್ : **8652144308**

# ಸಂಕ್ಷಿಪ್ತ ಸುದ್ದಿಗಳು

## ಡಾ. ತಾಳ್ತಜೆಗೆ ಸೇಡಿಯಾಪು ವಿದ್ವತ್ ಪ್ರಶಸ್ತಿ



ಇಲ್ಲಿನ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ನೀಡುವ ಸೇಡಿಯಾಪು ವಿದ್ವತ್ ಪ್ರಶಸ್ತಿಗೆ 2011ನೇ ಸಾಲಿನಲ್ಲಿ ಖ್ಯಾತ ವಿದ್ವಾಂಸ ಡಾ. ತಾಳ್ತಜೆ ವಸಂತ ಕುಮಾರ ಅವರಿಗೆ ನೀಡಲಾಗಿದೆ.

ಜೂನ್ 5ರಂದು ಕಾರ್ಕಳದ ಸಂಭ್ರಮ ಸಭಾಮಂದಿರದಲ್ಲಿ ಜರುಗಿದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಕನ್ನಡ ವಿದ್ವತ್ ಪರಂಪರೆಗೆ ವಿಶೇಷ ಕೊಡುಗೆನೀಡಿದ ಸೇಡಿಯಾಪು ಇವರ ಹೆಸರಿನ ಪ್ರಶಸ್ತಿ ಸ್ವೀಕರಿಸಿ ಧನ್ಯತಾಭಾವ ವ್ಯಕ್ತಪಡಿಸಿದರು. ಹವ್ಯಕ ವೆಲ್ಫೇರ್ ಟ್ರಸ್ಟಿನ ಪೋಷಕ ಸದಸ್ಯರಾದ ತಾಳ್ತಜೆಯವರು ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿನಿಧಿಯನ್ನು ಸ್ಥಾಪಿಸಿ ಬೆಳೆಸುವುದರಲ್ಲಿ ವಿಶೇಷ ಶ್ರಮವನ್ನು ವಹಿಸಿದ್ದಾರೆ.

ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ 15 ವರ್ಷ, ಮುಂಬೈ ವಿವಿಯಲ್ಲಿ 22 ವರ್ಷಗಳ ಕಾಲ ಕನ್ನಡ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವರು. ಡಾ। ತಾಳ್ತಜೆಯವರಿಗೆ ಗೊರೂರು ಸಾಹಿತ್ಯ ಪ್ರಶಸ್ತಿ (2001), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2005), ಗುರುನಾರಾಯಣ ಸಾಹಿತ್ಯ ಪ್ರಶಸ್ತಿ (2009), ಕಾಂತಾವರ ಪ್ರಶಸ್ತಿ (2010), ಇತ್ಯಾದಿ ಪ್ರಶಸ್ತಿಗಳು ಲಭಿಸಿವೆ.

## ACHIEVEMENTS



* **Kumar Amogh Hegde,**
S/o. Smt. Veena and
Shri L. G. Hegde scored 97.00%
in X CBSC held in March 2011



* **Kumar Keshub Bhat**,
S/o. Smt. Jyoti and Shri Dilip Bhat,
Grandson of Smt. Parameshwari
and late Shri P. K.Bhat
scored 95.00% Xth I.C.S.C.
Examination held in March 2011



* **Kumari Sneha N. Rao**,
D/o. Smt. Sushma and
Shri Nagendra Rao, Dombivli
scored 94.00% in SSC Examination
held in March 2011



* **Kumari Madhura Joshi**,
D/o. Smt. Sharada and
Shri Narayan Joshi
scored 93.00% degree in
S.S.C.Examination.
She holds master and teacher training
degree in Bharatnatyam Dance



***Kumari Akshata Hegde**,
D/o. Smt. Suvarna and Shri Umesh
S. Hegde, Dombivli scored 90.17%
in H.S.C. Examination (Commerce)
held in February 2011



* **Kumar Akshaya Bhat**,
Mulund, S/o. Smt. Sulekha &
Shri Ganesh Bhat, Nilkod
scored 88.55% in S.S.C. Examination
held in March 2011.

***We congratulate and wish them all the success***

## 'ಶೋಧ' ಕಥಾ ಸಂಕಲನದ ಬಿಡುಗಡೆ

ಮಾಟುಂಗಾ ಕರ್ನಾಟಕ ಸಂಘದ ಸಮರಸ ಭವನದಲ್ಲಿ ಜೂನ್ 25ರ ಸಂಜೆ ಮುಂಬಯಿ ಹಾಗೂ ಅಭಿಜಿತ್ ಪ್ರಕಾಶನ ಮುಂಬಯಿಯ ಜಂಟಿ ಕಾರ್ಯಕ್ರಮದಲ್ಲಿ ಗಂಗಾಧರ ಪಣಿಯೂರು ಅವರ 'ಶೋಧ' ಕಥಾ ಸಂಕಲನದ ಬಿಡುಗಡೆಯಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಖ್ಯಾತ ವಿಮರ್ಶಕ 'ವಿ.ಗ. ನಾಯಕ್' ಮಾತನಾಡುತ್ತಾ ಕತೆ ಕತೆಗಾರರನ್ನು ಮೀರಿ ಬೆಳೆಯುತ್ತಿದೆ. ಸಾಹಿತ್ಯ ಕತೆಗಾರನ ಅಪಾರ ಅನುಭವವನ್ನು ಪ್ರತಿಸ್ಪಂಧನವಾಗಿರಿಸುತ್ತದೆ. ಮಾನವೀಯ ಮೌಲ್ಯಗಳ ಹುಡುಕಾಟದ ಮೂಲಕ ಗಂಗಾಧರ ಪಣಿಯೂರು ಓರ್ವ ದಾರ್ಶನಿಕ ಕತೆಗಾರನಾಗಿ ಮೂಡಿ ಬಂದಿದ್ದಾರೆ ಎಂದರು.

ವೇದಿಕೆಯಲ್ಲಿದ್ದ ಅಭಿಜಿತ್ ಪ್ರಕಾಶನದ ಸಂಚಾಲಕರಾದ ಡಾ। ಉಪಾಧ್ಯರು ಲೇಖಕರಿಗೆ ಶುಭ ಹಾರೈಸಿದರು. ರಂಗಕರ್ಮಿ ಕರ್ನಾಟಕ ಸಂಘ ಮುಂಬಯಿ ಕಾರ್ಯದರ್ಶಿ ಡಾ। ಭರತ್‌ಕುಮಾರ್ ಪೊಲಿಪು ಕೃತಿಯನ್ನು ಪರಿಚಯಿಸಿದರು. ಲೇಖಕ ಹರೀಶ್ ಹೆಜ್ಮಾಡಿ ಕಾರ್ಯಕ್ರಮವನ್ನು ನಿರೂಪಿಸಿದರು.

## 'ಇದು ಅಂತರಂಗದ ಸುದ್ದಿ' ಕವನ ಸಂಕಲನದ ಬಿಡುಗಡೆ

ಜೂನ್ 9ರಂದು ಕರ್ನಾಟಕ ಸಂಘದ ಸಮರಸ ಭವನದಲ್ಲಿ ಕವಿತಾ ಪ್ರಕಾಶನ ಮುಂಬಯಿ ಹಾಗೂ ಮುಂಬಯಿ ಚುಕ್ಕಿ ಸಂಕುಲದ ಜಂಟಿ ಪ್ರಾಯೋಜಕತ್ವದಲ್ಲಿ ಕವಿ ವಿ. ಎಸ್. ಶಾನಭಾಗರಿಂದ ವಿರಚಿತ 'ಇದು ಅಂತರಂಗದ ಸುದ್ದಿ' ಕವನ ಸಂಕಲನದ ಬಿಡುಗಡೆಯಾಯಿತು.

ಖ್ಯಾತ ಕವಿ, ಕತೆಗಾರ, ಅಂಕಣಗಾರ ಜಯಂತ ಕಾಯ್ಕಿಣಿಯವರು ಪುಸ್ತಕ ಬಿಡುಗಡೆ ಮಾಡಿ ''ಮುಂಬಯಿಯಲ್ಲಿ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಅನನ್ಯತೆಯಿದೆ. ಅದು ಬೆಳೆಯುತ್ತಲೂ ಇದೆ. ಮುಂಬಯಿಯ ಧಾವಂತ ಜೀವನದ ನಡುವೆಯೂ ಮಿಡಿಯುವ ಮಾನವೀಯತೆಯು, ನಮ್ಮ ನಡುವೆ ಓಡಾಡುವ ಪಾತ್ರಗಳು ಜೀವಂತ ಪ್ರತಿಮೆಗಳಾಗಿ ನಮ್ಮ ಕಣ್ಣೆದುರಿಗೆ ನಿಲ್ಲುತ್ತವೆ. ಸಾಹಿತಿಗೆ ಪ್ರೇರಕ ಶಕ್ತಿಯಾಗುತ್ತವೆ''ಎಂದರು. ವಿ. ಎಸ್. ಶಾನಭಾಗರ ಕವನ ಸಂಕಲನ ಅವರ ಅಂತರಂಗದ ವಿಕಾಸವನ್ನು ಪ್ರತಿಫಲಿಸುತ್ತದೆ ಎಂದು ಕಾಯ್ಕಿಣಿಯವರು ಅಭಿಪ್ರಾಯ ಪಟ್ಟರು.

*PAGE DONATED BY :* ***WELL WISHER OF HWT***

ಮುಖ್ಯ ಅತಿಥಿಯಾಗಿ ಅಕ್ಷಯ ಮಾಸಿಕದ ಗೌರವ ಸಂಪಾದಕರಾದ ಎಂ. ಬಿ. ಕುಕ್ಯಾನ್ ಹಾಗೂ ಅತಿಥಿ ಸಿ. ಬಿ. ಕಾಮತ್‌ರವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕವಯತ್ರಿ, ವಿಮರ್ಶಕಿ ಡಾ. ಗಿರಿಜಾ ಶಾಸ್ತ್ರಿಯವರು ಕೃತಿಯನ್ನು ಪರಿಚಯಿಸಿದರು. ಕವಯಿತ್ರಿ ಜಿ. ಪಿ. ಕುಸುಮ ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ನವೀನ್ ಕರ್ಕೆರಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಪ್ರಶಸ್ತಿ



ಸಾವಯವ ಕೃಷಿ ಉತ್ಪನ್ನಗಳ ರಫ್ತು ಮಾರುಕಟ್ಟೆಯಲ್ಲಿಮುಂಚೂಣಿಯಲ್ಲಿರುವ, ಬೆಂಗಳೂರಿನ ಫಲದ ಆಗ್ರೋ ರೀಸರ್ಚ್ ಫೌಂಡೇಶನ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯು ಕಳೆದ ಒಂದು ದಶಕಕ್ಕೂ ಮೇಲ್ಪಟ್ಟ ಅವಧಿಯಲ್ಲಿ ಕರ್ನಾಟಕ ರಾಜ್ಯ ಮತ್ತು ದೇಶಾದ್ಯಂತ ಇರುವ ರೈತರಲ್ಲಿ ಸಾವಯವಕೃಷಿ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಸಾವಯವ ಕೃಷಿ ಮಾಡುವುದರಿಂದ ಆರ್ಥಿಕ ಮಟ್ಟ ಸುಧಾರಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ಕೊಡುತ್ತ ಬಂದಿದೆ. ಸತತವಾಗಿ ಕಳೆದ ಮೂರುವರುಷಗಳಿಂದ ಈ ಕಂಪೆನಿಯು FKCCI ಅವಾರ್ಡನ್ನು ಪಡೆಯುತ್ತಾ ಬಂದಿದೆ. ಫೆಡರೇಶನ್ ಆಫ್ ಕರ್ನಾಟಕ ಚೇಂಬರ್ ಆಪ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನವರು ಈಬಾರಿಯೂ ಕಂಪೆನಿಯ ಸಾಧನೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಜೂನ್ 16ರಂದು ಬೆಂಗಳೂರಿನ ಲೀ ಮುಡಿಯನ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಜಯಾ ಬ್ಯಾಂಕಿನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಎಚ್.ಎಸ್.ಉಪೇಂದ್ರ ಕಾಮತ್ ಅವರಿಂದ ಪ್ರಶಸ್ತಿ ಫಲಕವನ್ನುಕಂಪೆನಿಯ ನಿರ್ದೇಶಕಿ ಶ್ರೀಮತಿ ಶೋಭಾ ಎನ್.ಶಾಸ್ತ್ರಿಯವರು ಪಡೆದುಕೊಂಡಿದ್ದಾರೆ.ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ FKCCI ಅಧ್ಯಕ್ಷ ಶ್ರೀನಿವಾಸಮೂರ್ತಿ, ವಾಣಿಜ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜ್ಯೋತಿರ್ಲಿಂಗಮ್ ಮುಂತಾದ ಗಣ್ಯರು ಹಾಜರಿದ್ದರು. ಸಾವಯವ ಕೃಷಿ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ವ್ಯವಸ್ಥೆ ಒದಗಿಸುವಲ್ಲಿ ಮತ್ತು ರೈತರಿಗೆ ಹೆಚ್ಚಿನ ಬೆಲೆ ಕೊಡಿಸುವಲ್ಲಿ ಮಹತ್ವಪೂರ್ಣ ಕೆಲಸ ಮಾಡುತ್ತಾ ಪ್ರಗತಿಯಪಥದಲ್ಲಿ ದಾಪುಗಾಲು ಹಾಕುತ್ತಿರುವ ಕಂಪೆನಿಗೆ, ಇನ್ನಷ್ಟು ಸಾಧನೆ ಮಾಡಲು ಈ ಪ್ರಶಸ್ತಿಯಿಂದ ಪ್ರೋತ್ಸಾಹ ದೊರೆತಿದೆ ಎಂದು ನಿರ್ದೇಶಕಿ ಶ್ರೀಮತಿ ಶೋಭಾ ಶಾಸ್ತ್ರಿಯವರು ತಿಳಿಸಿದ್ದಾರೆ. ಇವರು ಮೂಲತಃ ಕೃಷಿಕ ಕುಟುಂಬದಿಂದ ಬಂದವರಾಗಿದ್ದು, ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಮಂಚಾಲೆ ಗ್ರಾಮದ ದಿವಂಗತ ಮಂಜಪ್ಪನವರ ಪುತ್ರಿಯಾಗಿದ್ದುಪುತ್ತೂರು ತಾಲೂಕು ಬಡೆಕ್ಕಿಲ ಗ್ರಾಮದ ಸಿ.ಎಂ. ನಾರಾಯಣ ಶಾಸ್ತ್ರಿಯವರ ಪತ್ನಿ ಆಗಿರುತ್ತಾರೆ.



## OBITUARY

**Shri Timmanna S. Bhat** (86) expired on 13th July 2011due to heart attack. He hailed from Chitragi, Kumta. He was the Ex-President of Havyaka Welfare Trust, Mumbai. He was an I. F. S Officer and retired as Conservator of Forest. He is survived by Four daughters and a son We pray for the eternal peace of the departed soul.



ಶಿರಸಿಯ ವಿನಾಯಕ ಕಾಲೊನಿಯಲ್ಲಿ 25 ವರ್ಷಗಳಿಂದ ಗೋರೆ ಭಟ್ಟರೆಂದೇ ಹೆಸರಾಗಿದ್ದ **ಶ್ರೀ ವಿ. ಜಿ. ಭಟ್ ಗೋರೆ**ಯವರು ಜೂನ್ 22ರಂದು ದೈವಾಧೀನರಾದರು. ಅವರಿಗೆ 81 ವರ್ಷವಾಗಿತ್ತು. ಸಹಕಾರಿ ಸಂಘಗಳ ಆಡಿಟ್ ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾಗಿದ್ದ ಅವರು ತಮ್ಮ ಸೇವಾವಧಿಯಲ್ಲಿ ಎಲ್ಲರೊಡನೆ ಪ್ರೀತಿಯಿಂದಿದ್ದು ಉತ್ತಮ ಅಧಿಕಾರಿಯೆಂದು ಹೆಸರು ಪಡೆದಿದ್ದರು. ನಿವೃತ್ತಿಯ ನಂತರ ಹಲವಾರು ಸಂಘ-ಸಂಸ್ಥೆಗಳ ಕಾರ್ಯಗಳಲ್ಲಿ ಕ್ರಿಯಾಶೀಲರಾಗಿದ್ದರು. ಸಾಹಿತ್ಯಾಸಕ್ತರಾಗಿದ್ದ ಅವರು ಅನೇಕ ವೈಚಾರಿಕ ಆಧ್ಯಾತ್ಮಿಕ ಲೇಖನಗಳಲ್ಲದೆ ಕವನಗಳನ್ನು ಸಹ ರಚಿಸಿದ್ದರು. ಸದಾ ಹಸನ್ಮುಖಿಯಾಗಿದ್ದ ಅವರ ಆತ್ಮಕ್ಕೆ ಪರಮಾತ್ಮ ಚಿರಶಾಂತಿ ನೀಡಲೆಂದು ನಮ್ಮೆಲ್ಲರ ಪ್ರಾರ್ಥನೆ



ನಮ್ಮ ಸಂಸ್ಥೆಯ ಆಜೀವ ಸದಸ್ಯರಾದ **ಶ್ರೀ ಬಾಲಚಂದ್ರ ಶಂಕರ ಹೆಗಡೆ** (ಬಿ. ಎಸ್. ಹೆಗಡೆ, ಬೋರಿವಲಿ) ಇವರು 13.7.2011ರಂದು ದೈವಾಧೀನರಾದರು. ಇವರು ಮೂಲತಃ ಕುಮಟಾ ತಾಲೂಕಿನ ಕಡ್ಲೆ ಗ್ರಾಮದವರು. 72 ವರ್ಷಗಳ ತುಂಬು ಜೀವನ ನಡೆಸಿದ ಇವರು ಪತ್ನಿ, ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸೋಣ.

## 1947 AND AFTER

On the 15th of August, t'was the night
Thousands witnessed a great sight,
And were now conscious of their right...

For the flag was raised and crowds cheered,
Wasting no time in forgetting the feared.

This epic moment brought a smile,
[and of course, stretched for a mile],
But this joy was only for a short while.

For then the word 'CORRUPTION' came,
And made money-making a big game.

And soon in the Indian nation,
Where everywhere was an amicable tradition,
Started a money-making addiction...

What can we do about this corrupt nation,
Say many, unless hold sessions...

But I say, come on, let's fight,
**And show the corrupt** our might
So that on the Independence Day,
We can raise our chest in pride,
And our smiles [again a mile wide],
Will kick out the previous shameful ray.

By **Advait Ramesh Vaidya**,
9th Std., SIA High School, Dombivili

*PAGE DONATED BY : **SHRI N. R. HEGDE, DOMBIVLI** (DEC.-2011)*

# ಸುಂದರ ಕಾಂಡ

*(ಹಿಂದಿನ ಸಂಚಿಕೆಯಿಂದ)*

*ಮೂಲ : ತೆಲುಗು ಕನ್ನಡಕ್ಕೆ ಅನುವಾದ: ಶ್ರೀಮತಿ ದೇವಿ ಭಟ್*

21) ಅಮ್ಮಾ ರಾಮನು ನಿನ್ನ ವಿರಹದಿ
ಅನ್ನ ಪಾನಗಳ ಬಿಟ್ಟಿರುವ।
ಅತಿ ದುಃಖದಿ ಈ ಉಂಗುರವನ್ನು
ನಿನಗೆ ಕೊಡಲು ಎನ್ನ ಕಳಿಸಿರುವ ।।ಸು।।

22) ಹನುಮನ ಮಾತು ಕೇಳಿದ ಜಾನಕಿ
ಆನಂದದಿ ತಾ ಮುಳುಗಿದಳು।
ಸಾಗರ ಲಂಘನ ಮಾಡಿದ ನೀನು
ಮಹಾನುಭಾವನೆಂದು ಪೊಗಳಿದಳು ।।ಸು।।

23) ಸುಗ್ರೀವಾದಿ ವಾನರ ಸಹಿತ
ಲಂಕೆಗೆ ಬಂದು ಲಂಕೇಶನ ಕೊಂದು।
ಬಿಡಿಸಿರಿ ಎನ್ನ ಬಂಧನದಿಂದ
ಎಂದು ನೀ ಅರುಹು ಶ್ರೀರಾಮನಿಗೆ ।।ಸು।।

24) ಸೀತಾಮಾತೆ ತನ್ನ ಗುರುತಿಗಾಗಿ
ಕಾಕಾಸುರನ ಕತೆಯನು ಹೇಳಿ।
ಚೂಡಾಮಣಿಯನು ಹನುಮಗೆ ಕೊಟ್ಟು
ರಾಮಚಂದ್ರಗೆ ಅರ್ಪಿಸೆಂದಳು ।।ಸು।।

25) ಅಂಜನಿಸುತನು ಅತಿ ಆನಂದದಿ
ವೃಕ್ಷಗಳನ್ನು ಕೆಡಹಿದನು।
ಅಶೋಕ ವನವನು ಧ್ವಂಸ ಮಾಡಿ
ರಾವಣ ಸೇನೆಯ ವಧಿಸಿದನು ।।ಸು।।

26) ರಾವಣ ಪುತ್ರ ಅಕ್ಷಯ ಕುಮಾರನ
ಮಂತ್ರಿ ಸುತರ ಕಿಂಕರರ ।
ವಧಿಸಿದ ಆ ವಾಯುಪುತ್ರ
ಮೇಘನಾಥನ ಎದುರಿಸಿದ ।।ಸು।।

27) ಮೇಘನಾಥನು ಬ್ರಹ್ಮಾಸ್ತ್ರ ಹೂಡಲು
ವಾಯು ಸುತನದಕೆ ಶರಣೆಂದ।
ಹನುಮನ ಬಂಧಿಸಿ ಇಂದ್ರಜಿತುವು
ರಾವಣ ಸಭೆಗೆ ಕರೆದೊಯ್ದ ।।ಸು।।

28) ಸೀತಾಮಾತೆಯ ರಾಮನಿಗರ್ಪಿಸು
ರಾಮನ ಶರಣು ನೀ ಆಗೆಂದ ।
ರಾಮ ದೂತ ಹನುಮ ತಾನೆಂದ
ರಾವಣ ಕೋಪಿಸಿ ಗರ್ಜಿಸಿದ ।।ಸು।।

29) ಹನುಮನ ಹತ್ಯೆ ಮಾಡಿರೆಂದ
ದೂತನ ಹತ್ಯೆ ಪಾಪವೆಂಬುದ ।
ವಿಭೀಷಣಾದಿ ಅರುಹಿದರಾಗ
ಬಾಲಕೆ ಬೆಂಕಿ ಹಚ್ಚಿರೆಂದ ।।ಸು।।

30) ರಕ್ಕಸ ಬಳಗವು ಹನುಮನ ಮುತ್ತಿತು
ಅವನ ಬಾಲಕೆ ಎಣ್ಣೆ ಬಟ್ಟೆ ಸುತ್ತಿತು।
ಬೆಂಕಿ ಇಕ್ಕಿತು ಉತ್ಸಾಹದಿಂದ
ಬೀದಿಲಿ ಎಳೆಯಿತು ಅನಾದರದಿಂದ ।।ಸು।।

*(ಮುಂದುವರಿಯುವುದು)*


**SUVITEK INTERNATIONAL**

Authorised Dealers for :
ARMSTRONG, INTERARCH, CRIL

- PRE-ENGINEERED BUILDINGS
- ROOFINGS
- WALL CLADDINGS
- THERMAL INSULATIONS
- FALSE CEILINGS
- FALSE FLOORINGS
- BLINDS
- SIGNAGES

5/98, Jayvijay Society, Sahar Road,
Mumbai-400 099 India
Tel. : 2834 2952 ● Fax : 2824 8794
E-mail : suvitek@gmail.com

ADVT.



UIL

**UGRU INDUSTRIES**

*With Best Compliments from*

**UGRU INDUSTRIES**
Manufacturers of Speciality food products

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.


*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

'Havyaka Sandesha', August 2011

RNI NO. MAHBIL / 2000 / 746,
Post al R.NO. L / TECH - 47 / 989 / MBI / 2009 - 11

Posted at Mumbai Patrika Channel Stg. Office Mumbai-400 001·

Date of Posting :
27, 28th of every previous month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

# CAREER PLANNING – SOME BASIC POINTS

In today's extremely competitive world, both students and parents are very much concerned about future career prospects. Marks obtained are getting higher and cut-off points in universities are very challenging even for a lot of meritorious students. Then come in a flood of opinions from various people as to 'xyz' option will fetch a good job, it offers good salary package etc.

Its good to take advice from others but the most critical part is to identify what are the underlying strengths and weaknesses in a person and which are the areas a person can excel in. This is best done by counsellors who conduct a 360 degree assessment on Intelligence Quotient (IQ), Emotional Quotient (EQ). This kind of a consultative approach has a lot of merits. First, the student can talk freely in an uninhibited manner to the counsellor. Many times, youngsters hold back their true feelings either due to fear or due to introvert nature. The neutral environment with the counsellor helps people to shed their inhibitions. Second, the parents also get some time alone with the counsellor who can bridge the gap with a neutral stance. It is extremely critical for parents not to superimpose their unfulfilled ambitions on children. On the other hand, youngsters should avoid rebellion and rather candidly discuss their strengths and weaknesses and long-term goals with parents.

Gone are the days when you had to be an engineer, doctor, chartered accountant or MBA only to be successful. Today, the spectrum of education options is much wider and plenty of courses are available to suit one's interests. In the race for engineering and medicine, lakhs of rupees are spent on capitation fees etc for an engineering / medical seat; moreover these are tier2 and tier3 schools. Regardless of which level of education or stream you are looking for, aim for the Tier1 schools only. For students in the engineering segment, especially, gone are the days when HR comes hunting in engineering colleges only. Today good IT companies visit all top rung colleges to pick up talent. A lot of top notch companies today believe in developing management talent in-house. These are on the job training programs and ensure a good learning and development environment with good compensation and benefits, taking a 5 to 7 year horizon.

Typically, after SSC, the choices begin with Science, Commerce and Arts in that order. For a change, I will start with Arts, followed by Commerce and Science at last. Never consider Arts to be a stream for people with low marks or for girls who intend to be homemakers etc. One can actually build a solid foundation in literature and then go on to pursue careers in journalism, law and of course, teaching. With the internet revolution, publishing companies, media websites are looking for real talent to contribute meaningful articles, stories and they pay well to do so as well. Another stream in Arts, looked down upon is Economics. It is a very sad perception that a lot of people in India have even today. While the 2G mobile spectrum corruption is in the news in India, the mobile spectrum allocations in US and UK were the most successful spectrum auctions. The auction designers were felicitated for the way, they brought in revenues to the government, yet ensured good pricing for consumers. If you thought that these auctions were designed by some business geniuses, you are wrong. These were people with a very strong background in economics and game theory. Yes, it's a fact that economists who develop a strong proficiency in commercial geography and/or game theory are most sought after in government as well as business institutions. Economists who specialize in statistics as well are sought after people in areas like pricing of products/services etc. Psychology is another area where there is a lot of demand; be it for counselling, understanding consumer behaviour or for teaching the mentally challenged children, psychology is in great demand today. However, as I always emphasize during any career counselling session, it is extremely critical to go deeply into a subject. If one takes up literature, it's just not ok to study for the exam and get out. One has to dig deep into not just Shakespeare, Oscar Wilde but deeply go into classics, poetry, understand how literature evolved in different geographies under different geopolitical and socioeconomic environments. If you go into economics, you need to dig deep and do a lot of data digging, rather than just parrot the marginal cost-revenue model and the ISLM model. One can also go ahead with an MBA after pursuing journalism/media/economics courses.

Coming into commerce, it's not just about being a chartered accountant or a simple accountant. Today, the business world needs people good at accounts, cost accounting, capital market specialists etc. One can very well go ahead for an advanced management course. In fact, even in the software world, there is great demand for people who have a commerce background as they manage to combine IT capabilities along with their finance / accounting capabilities. Once again, the emphasis on depth is critical and not just passing exams. Capital markets spread across various asset classes like equities, derivatives, hedge funds, fixed income etc. The other option is to go ahead with banking specialities, be it on the retail or investment banking segment.

For science, all said and done, the options are greater in number. Apart from engineering and medicine, today there is demand for geology experts, agriculture/horticulture experts so on and so forth.

At the end of the day, the stream you choose should be something that will suit your IQ/EQ levels and something you will enjoy learning and doing. It's very difficult to put all options in one single article. I would suggest youth and parents to seek counselling from experts in your city to first figure out what options your profile is best suited for. Make sure that the following tests are administered under the guidance of an expert

• IQ Test, MBTI Profile, Firo-B Profile

Last but not the least, despite my education levels and international exposure, I always prefer to take an astrological view as well on possible options. So good luck with your education and career endeavours. Based on demand, I will try to give a specific education and career path in the next few articles.

**Nagraj Baggon**

*PAGE DONATED BY : **SHRI VIVEK BHAGWAT,** MULUND (DEC.-2010)*